ಬ್ರಹ್ಮಸಮಾಜಕ್ಕೂ ಹೋಗಿ ಭೇಟಿಯಾಗಿದ್ದರು. ಇನ್ನೊಮ್ಮೆ ಅವನ ಮನೆಗೇ ಹೋದರು. ಅವನಿಗಾಗಿ ಮಿಠಾಯಿಯನ್ನು ಕೈಲಿಟ್ಟುಕೊಂಡು, ಕೈಯಾರೆ ತಿನಿಸಿ ಸಂತೋಷಪಟ್ಟರು. "ಎಲ್ಲಿ, ಒಂದು ಹಾಡು ಹೇಳು" ಎಂದು ಕೇಳಿದರು. ನರೇಂದ್ರ ತಂಬೂರಿಯನ್ನು ಮೀಟಿಕೊಂಡು ಜಗನ್ಮಾತೆಯ ಕೀರ್ತನೆಯನ್ನು ಹಾಡಿದ. ಶುದ್ಧವಾದ, ಭಕ್ತಿಪೂರ್ಣವಾದ ಹೃದಯದಿಂದ ಹೊಮ್ಮಿದ ಆ ಗಾಯನವನ್ನು ಕೇಳಿ ಗುರು ಸಮಾಧಿಮಗ್ನರಾದರು.

ಭಗವತ್ಸಾಕ್ಷಾತ್ಕಾರದ ಹಂಬಲದಲ್ಲಿ ನರೇಂದ್ರನೂ, ತಾರಕನಾಥ, ಕಾಳಿಪ್ರಸಾದರೂ ಕಾವಿಧಾರಿ ಪರಿವ್ರಾಜಕರಾಗಿ ಬುದ್ಧಗಯೆಗೆ ಹೋದರು. ಪವಿತ್ರವೂ ಪ್ರಶಾಂತವೂ ಆಗಿದ್ದ ಗಯೆಯಲ್ಲಿ ನರೇಂದ್ರನಿಗೆ ವಿಶೇಷ ಭಾವಾನುಭವವಾಯಿತು. ನಂತರ ತನ್ನ ತಂದೆಯ ಹಳೆಯ ಸ್ನೇಹಿತರೊಬ್ಬರನ್ನು ಭೇಟಿ ಮಾಡಿದ. ಅವರಿಗೆ ತುಂಬಾ ಸಂತೋಷವಾಯಿತು. ಮಾರನೆ ದಿನ ಈ ಮೂವರನ್ನೂ ಮನೆಗೆ ಕರೆದು ಆತಿಥ್ಯ ನೀಡಿದರು. ಅಂದು ಸಂಜೆ ಸಂಗೀತಗೋಷ್ಠಿ ನಡೆಯಿತು. ನರೇಂದ್ರನ ದಿವ್ಯಕಂಠದ ಗಾಯನವೂ ಆಯಿತು. ಅವನ ಅದ್ಭುತವಾದ ಹಾಡುಗಾರಿಕೆ ಎಲ್ಲರ ಮನ ಸೆಳೆಯಿತು.

ಒಮ್ಮೆ ನಾಸ್ತಿಕನಾಗಿ, ಇನ್ನೊಮ್ಮೆ ಆಸ್ತಿಕನಾಗಿ ಎರಡೂ ಪಕ್ಷಗಳಿಂದಲೂ ಸಮರ್ಥವಾಗಿ ವಾದ ಮಂಡಿಸುತ್ತಿದ್ದ ನರೇಂದ್ರ ಸೋದರ ಸಂನ್ಯಾಸಿಗಳಿಗೆ, "ನೋಡು, ಭಗವಂತ ಇದ್ದಾನೆ ಎಂಬುದಕ್ಕೆ ನಿಮ್ಮ ದಯಾಪೂರ್ಣವಾದ ಹೃದಯವೇ ಸಾಕ್ಷಿ. ಮನುಷ್ಯನ ಹೃದಯದಲ್ಲಿ ಒಂದಿಷ್ಟಾದರೂ ದಯೆಯನ್ನಿರಿಸಿರುವ ಆ ದೇವರು ಕರುಣಾಸಾಗರನೇ ಸರಿ" ಎಂದು ಹೇಳಿದ. "ಮತ್ತೆ ಒಮ್ಮೊಮ್ಮೆ ದೇವರಿಲ್ಲ ಎನ್ನುತ್ತೀಯಲ್ಲ" ಎಂದು ಕೇಳಿದ ಪ್ರಶ್ನೆಗೆ ನರೇಂದ್ರ, "ನಾವು ಅಹಂಕಾರದಿಂದ ಮತ್ತರಾಗಿರುವವರೆಗೆ, ಆಸೆಗಳಿಗೆ ದಾಸರಾಗಿರುವವರೆಗೆ, ನಮಗೆ ಭಗವಂತನ ಮೇಲೆ ಭಕ್ತಿ ಶ್ರದ್ಧೆ ಹುಟ್ಟುವುದಿಲ್ಲ" ಎಂದು ಹೇಳಿದ. ಹಾಗೆಯೇ **"ಕರುಣಾಮಯನಾದ ಅವನಲ್ಲಿ ಶರಣಾಗತರಾದವರಿಗೆ ದೇವರು ಕೃಪೆ ತೋರಿಯೇ ತೋರುತ್ತಾನೆ"** ಎಂಬರ್ಥದ ಹಾಡೊಂದನ್ನು ತನ್ನ ಜೇನಿನ ಕಂಠದಲ್ಲಿ ಭಾವದುಂಬಿ ಹಾಡಿದ. ಇದನ್ನು ಸುತ್ತಲಿದ್ದವರೆಲ್ಲ ಕೇಳಿ ಆನಂದಪರವಶರಾದರು.

ಸ್ವಾಮೀಜಿ ಪರಿವ್ರಾಜಕರಾಗಿ ಭಾರತಪರ್ಯಟನಕ್ಕೆ ಹೊರಡುವ ಮುನ್ನ, ಕೆಲವು ಕಾಲ ಏಕಾಂತದಲ್ಲಿರಲು ಹಿಮಾಲಯದತ್ತ ಹೊರಟರು. ಜೊತೆಗೆ ಗುರುಬಂಧು ಅಖಂಡಾನಂದರಿದ್ದರು, ಆನಂದವಾಗಿ ಗಂಗಾನದಿಯ ಜಾಡಿನಲ್ಲೇ ಸಾಗಿದ ಇವರಿಬ್ಬರೂ ಮೊದಲು ನಿಂತುದು ಭಾಗಲ್ಪುರದಲ್ಲಿ. ಅಲ್ಲಿ ಅಕಸ್ಮಾತ್ತಾಗಿ ಸಿಕ್ಕ ಮನ್ಮಥನಾಥ ಚೌಧುರಿ ಎಂಬುವವರು ಇವರ ತೇಜಃಪುಂಜವಾದ ಮುಖಗಳನ್ನು ನೋಡಿ, ಇವರು ಸಾಧಾರಣ ಬೈರಾಗಿಗಳಲ್ಲ ಎಂದುಕೊಂಡು, ಮಾತನಾಡಿಸಿ ಮನೆಗೆ ಕರೆದುಕೊಂಡು ಹೋಗಿ ಇರಿಸಿಕೊಂಡರು. ಭಾಗಲ್ಪುರದಲ್ಲಿದ್ದಾಗ ಸ್ವಾಮೀಜಿಯ ವಿದ್ವತ್ತು ಹಾಗೂ ವಾಕ್ಸರಣಿಗೆ ಮರುಳಾದ ಮನ್ಮಥ ಬಾಬು, ಒಂದು ದಿನ ತಮ್ಮಷ್ಟಕ್ಕೆ ಹಾಡಿಕೊಳ್ಳುತ್ತಿದ್ದ ಸ್ವಾಮೀಜಿಯ ಗಾಯನವನ್ನು ಕೇಳಿ ಆಕರ್ಷಿತರಾದರು. ಮನೆಯವರೆಲ್ಲರ ಬಲವಂತಕ್ಕೆ ಸ್ವಾಮೀಜಿ ಸ್ವಲ್ಪ ಹೊತ್ತು ಕೂತು ಹಾಡಬೇಕಾಯಿತು. ಎಲ್ಲರೂ ಅವರ ಸಂಗೀತದ ಮೋಡಿಗೊಳಗಾದರು. ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆ, ಯೋಗಶಾಸ್ತ್ರ, ವಿವಿಧ ಧರ್ಮಗಳ ಜ್ಞಾನ – ಇವುಗಳಲ್ಲಿ ಮಾತ್ರವಲ್ಲ, ಸಂಗೀತದಲ್ಲೂ ಸ್ವಾಮೀಜಿ ತುಂಬಾ ಪ್ರತಿಭಾವಂತರೆಂದು ಅವರೆಲ್ಲ ತಿಳಿದು ವಿಸ್ಮಿತರಾದರು. ಸ್ವಾಮೀಜಿಯನ್ನು ಕೇಳಿ ಒಪ್ಪಿಗೆ ಪಡೆದು ತಮ್ಮ ಮನೆಯಲ್ಲಿ ಅವರೊಬ್ಬರದೇ ಸಂಗೀತ ಕಾರ್ಯಕ್ರಮವನ್ನಿಟ್ಟುಕೊಂಡರು. ಊರಿನ ದೊಡ್ಡ ದೊಡ್ಡ ಸಂಗೀತ ವಿದ್ವಾಂಸರನ್ನೂ, ಸಂಗೀತಾಭಿಮಾನಿಗಳನ್ನೂ ಆಹ್ವಾನಿಸಿದರು. ಸ್ವಾಮೀಜಿ ರಾತ್ರಿ ೯–೧೦ ಗಂಟೆವರೆಗೆ ಮಾತ್ರ ಹಾಡಬಹುದು ಎಂದು ಆಹ್ವಾನಿತರಾರಿಗೂ ಊಟದ ವ್ಯವಸ್ಥೆ ಮಾಡಿರಲಿಲ್ಲ. ಆದರೆ ಸ್ವಾಮೀಜಿ ಸೊಗಸಾಗಿ ಹಾಡುತ್ತ ಮೈಮರೆತರು. ಶ್ರೋತೃಗಳೂ ತಲೆದೂಗುತ್ತ ಮೆಚ್ಚುಗೆಯ ಉದ್ಗಾರ ಮಾಡುತ್ತಿದ್ದರು. ಕಾಲ ಹೋದುದೇ ತಿಳಿಯಲಿಲ್ಲ. ಎಲ್ಲರೂ ಭಕ್ತಿಭಾವ ತುಂಬಿದ ಗಾಯನದಲ್ಲಿ ಮುಳುಗಿ ಹೋದರು. ಗಂಟೆ ಹತ್ತಾಯಿತು, ಹನ್ನೊಂದಾಯಿತು. ಯಾರಿಗೂ ಹಸಿವು ಬಾಯಾರಿಕೆಗಳ ಪರಿವೆಯೇ ಇಲ್ಲ! ಒಬ್ಬರೂ ಕುಳಿತಲ್ಲಿಂದ ಕದಲಲಿಲ್ಲ. ಬೆಳಗಿನ ಜಾವ ಮೂರು ಗಂಟೆ ಹೊತ್ತಿಗೆ ಗಾಯನ ಮುಕ್ತಾಯವಾಯಿತು. ಅದಕ್ಕೂ ತಬಲಾ ಸಾಥ್ ನೀಡುತ್ತಿದ್ದವರು ಸುಸ್ತಾಗಿ ಕೈಯೇ ಓಡದಿದ್ದರಿಂದ ಗಾಯನ ನಿಲ್ಲಬೇಕಾಯಿತು. ಅಲ್ಲಿ ನೆರೆದ ಸಂಗೀತ ವಿದ್ವಾಂಸರೂ, ಮನ್ಮಥ ಬಾಬು ಅವರೂ "ಇಂತಹ ಅತಿಮಾನುಷ ಶಕ್ತಿಯನ್ನೂ, ಗಾನ ಮಾಧುರ್ಯವನ್ನು ಈ ಹಿಂದೆ ಎಂದೂ ಕಂಡಿರಲಿಲ್ಲ!" ಎಂದು ಉದ್ಗರಿಸಿದರು. ಮರುದಿನ ಸಂಜೆಯೂ ಸ್ವಾಮೀಜಿ ಹಾಡಬಹುದೆಂದು, ಆಮಂತ್ರಣವಿಲ್ಲದಿದ್ದರೂ ಬಹು ಸಂಖ್ಯೆಯಲ್ಲಿ ಜನ ಬಂದರು. ಆದರೆ ಸ್ವಾಮೀಜಿ ಅಂದು ಹಾಡಲಿಲ್ಲ. ಅವರು ವೃತ್ತಿಗಾಯಕರಲ್ಲ. ಮನಸ್ಸು ಬಂದಾಗ ದೇವರನ್ನು ನೆನೆಯುತ್ತಾ ತಾವಾಗಿ ಭಕ್ತಿಭರಿತರಾಗಿ ಹಾಡುವವರು. ಇತರರ ರಂಜನೆಗಾಗಿ, ಮೆಚ್ಚುಗೆಗಾಗಿ ಹಾಡುವವರಲ್ಲ. ಹೀಗಾಗಿ ಆಸೆಯಿಂದ ಬಂದವರು ನಿರಾಶರಾಗಿ ಹಿಂತಿರುಗಿದರು.

ಸ್ವಾಮೀಜಿಯ ಭಾರತ ಪರ್ಯಟನದಲ್ಲಿ ರಜಪುತಾನದ ಖೇತ್ರಿಯ ಮಹಾರಾಜ ಅಜಿತ್‌ಸಿಂಗ್, ಸ್ವಾಮೀಜಿಯ ಆತ್ಮೀಯ ಶಿಷ್ಯನೂ ಭಕ್ತನೂ ಆದುದು ಐತಿಹಾಸಿಕ ಮಹತ್ವದ್ದಾಗಿದೆ. ಮಹಾರಾಜನ ಅತಿಥಿಯಾಗಿ ಇದ್ದ ದಿನಗಳಲ್ಲಿ ರಾಜನ ಕೋರಿಕೆಯಂತೆ ಸ್ವಾಮೀಜಿ ಒಮ್ಮೊಮ್ಮೆ ಹಾಡುತ್ತಿದ್ದರು. ಸ್ವತಃ ಸಂಗೀತಗಾರನಾಗಿದ್ದ ಮಹಾರಾಜನೇ ಅವರಿಗೆ ಹಾರ್ಮೋನಿಯಂ ಸಾಥ್ ನೀಡುತ್ತಿದ್ದನು.

ಮುಂದೆ ದಕ್ಷಿಣದತ್ತ ಪಯಣಿಸಿ ಬೆಳಗಾವಿಯಲ್ಲಿ ಸ್ವಾಮೀಜಿ ಕೆಲವು ದಿನ ಇದ್ದರು. ಅಲ್ಲಿಗೆ ಬಂದಾಗ ಮೊದಲು ಭಾಟೆ ಎಂಬ ಮರಾಠಿ ಸದ್ಗೃಹಸ್ಥರ ಮನೆಯಲ್ಲಿದ್ದರು. ಅನಂತರ ಅರಣ್ಯಾಧಿಕಾರಿಯಾಗಿದ್ದ ಬಂಗಾಳಿ ಹರಿಪದ ಬಾಬು ಪರಿಚಿತರಾದರು. ಅವರು ಪ್ರೀತಿಯಿಂದ ಒತ್ತಾಯ ಮಾಡಿ, ಭಾಟೆಯವರನ್ನು ಒಪ್ಪಿಸಿ, ಸ್ವಾಮೀಜಿಯವರನ್ನು ತಮ್ಮ ಮನೆಯಲ್ಲಿರಿಸಿಕೊಂಡರು. ಸ್ವಾಮೀಜಿ ಸೊಗಸಾಗಿ ಹಾಡುತ್ತಿದ್ದುದು, ಅದನ್ನು ಕೇಳಿ ಸಂಜೆಯ ಭಜನೆಯಲ್ಲಿ ಭಾಗವಹಿಸಿದವರೆಲ್ಲರೂ ತನ್ಮಯರಾಗುತ್ತಿದ್ದುದು ಸರಿಯೆ. ಭಾಟೆಯವರು ಆಗಿನ ನೆನಪುಗಳನ್ನು ಹೇಳುವಾಗ, "ಪರಿವ್ರಾಜಕ ಸಂನ್ಯಾಸಿಗೆ ತಕ್ಕಂತೆ ಸ್ವಾಮೀಜಿಯ ಬಳಿ ಇದ್ದ ವಸ್ತುಗಳೆಂದರೆ ಕಾವಿಬಟ್ಟೆ, ಟವಲು, ಕರವಸ್ತ್ರ ಮತ್ತು ಕೆಲವೇ ಕೆಲವು ಪುಸ್ತಕಗಳು. ಆ ಪುಸ್ತಕಗಳಲ್ಲಿ ಫ್ರೆಂಚ್ ಸಂಗೀತದ ಪುಸ್ತಕವೂ ಒಂದು" ಎಂದು ಸ್ವಾಮೀಜಿಯ ವಿಸ್ತೃತ ಸಂಗೀತ ಪ್ರೇಮದ ಹಾಗೂ ವ್ಯಾಪಕ ಅಧ್ಯಯನದ ಮೇಲೆ ಬೆಳಕು ಚೆಲ್ಲುವ ಮಾತನ್ನೂ ಹೇಳಿದ್ದಾರೆ.

ಬೇರೆಲ್ಲೂ ಸಿಗದ, ಅಲ್ಲಿ ಮಾತ್ರ ದೊರೆಯುವ ಕ್ರೈಸ್ತಧರ್ಮ ಗ್ರಂಥಗಳನ್ನು ಅಧ್ಯಯನ ಮಾಡಲು ಸ್ವಾಮೀಜಿ ಮರ್ಮ ಗೋವಾಕ್ಕೆ ಬೆಳಗಾವಿಯಿಂದ ಪ್ರಯಾಣ ಮಾಡಿದರು. ಅಲ್ಲಿ ಸಂಸ್ಕೃತ ವಿದ್ವಾಂಸರೂ, ಹಿಂದೂ ಧರ್ಮಶಾಸ್ತ್ರಗಳನ್ನು ಚೆನ್ನಾಗಿ ತಿಳಿದುಕೊಂಡವರೂ ಆಗಿದ್ದ ಆಯುರ್ವೇದ ವೈದ್ಯ ಸುಬ್ರಾಯ ನಾಯ್ಕರ ಅತಿಥಿಯಾಗಿದ್ದರು. ಅಲ್ಲಿ ಪ್ರತಿ ದಿನ ಸಂಜೆ ಭಜನೆ – ಸತ್ಸಂಗ ಇರುತ್ತಿತ್ತು. ಸ್ವಾಮೀಜಿ ಭಾಗವಹಿಸಿದ ಮೊದಲ ದಿನವೇ ಅವರ ಸಂಗೀತ ಪ್ರೌಢಿಮೆ ನೆರೆದವರಿಗೆಲ್ಲ ತಿಳಿಯಿತು. ಮರುದಿನ ಹೆಸರಾಂತ ಶಾಸ್ತ್ರೀಯ ಸಂಗೀತದ ಗಾಯಕರು ವಾದಕರುಗಳನ್ನೆಲ್ಲ ಕರೆದು, ಸಂಗೀತ ಕಾರ್ಯಕ್ರಮವನ್ನಿಟ್ಟುಕೊಂಡರು ಸುಬ್ರಾಯ ನಾಯ್ಕರು. ಆ ಸಂದರ್ಭದಲ್ಲಿ ಗಾಯಕರೊಂದಿಗೆ ಮಾತನಾಡುತ್ತ, ಶಾಸ್ತ್ರೀಯ ಗಾಯಕರು ಹಾಡುವಾಗ ಮಾಡುವ ವಿವಿಧ ರೀತಿಯ ಅಂಗಭಂಗಿ, ಮುಖವಿಕಾರಗಳೆಲ್ಲ ಅನಿವಾರ್ಯ ಎಂಬ ಮಾತಿಗೆ ಸ್ವಾಮೀಜಿ ತಮಾಷೆಯಾಗಿ, **"ಹೌದು ಹೌದು, ಅದರಿಂದ ಕಿವಿಗಳಿಗೆ ಮಾತ್ರವಲ್ಲ, ಕಣ್ಣುಗಳಿಗೂ ರಂಜನೆ ಸಿಕ್ಕುತ್ತದೆ"** ಎಂದು ಹೇಳಿದರು. ಅಲ್ಲದೆ, ಅಂಗಚೇಷ್ಟೆಗಳಿಲ್ಲದೆ ಹಾಡುವುದೇ ಶಾಸ್ತ್ರೋಕ್ತವಾದ ಗಾಯನದ ಲಕ್ಷಣ ಎಂದು ಗಂಭೀರವಾಗಿ ಆಧಾರಗಳನ್ನು ಉಲ್ಲೇಖಿಸಿ ಪ್ರತಿಪಾದಿಸಿದರು. ಬಾಯಿಯನ್ನು ಸಹ ದೊಡ್ಡದಾಗಿ ತೆರೆಯದೆ, ಮೈ–ಕೈ–ಮೊಣಕಾಲುಗಳನ್ನು ಕಿಂಚಿತ್ತೂ ಅಲುಗಿಸದೆ ಹಾಡಬೇಕೆಂಬುದನ್ನು ಸ್ವತಃ ಹಾಗೆಯೇ ಗಂಭೀರವಾಗಿ ಕುಳಿತು ಹಾಡಿ ತೋರಿಸಿದರು. ಕಪೂರ್‌ಜಿ ಎಂಬ ಸುಪ್ರಸಿದ್ಧ ತಬಲಾವಾದಕ ಸ್ವಾಮೀಜಿಯ ಹಾಡುಗಾರಿಕೆಗೆ ಅಂದು ಸಾಥ್ ನೀಡಿದ. ಅವನೂ ಸಹ ತಲೆ, ಮೈ, ಕೈ ಅಲುಗಾಡಿಸುತ್ತಿದ್ದ. ಇದನ್ನು ಗಮನಿಸಿದ ಸ್ವಾಮೀಜಿ ತಾವು ಹಾಡಿಯಾದ ಮೇಲೆ, ಸ್ವತಃ ತಬಲಾವಾದನ ಮಾಡಿ ಶರೀರವನ್ನು ಅಲುಗಿಸುವುದೂ ಹೇಗೆ ಅನವಶ್ಯಕ, ಹಾಗೆ ಮಾಡದೆ ವಾದನ ಮಾಡುವುದು ಸಾಧ್ಯ ಎಂಬುದನ್ನೂ ತೋರಿಸಿಕೊಟ್ಟರು. ಈ ಮೂಲಕ ಅಲ್ಲಿ ನೆರೆದ ಸಂಗೀತಗಾರರೂ, ಶ್ರೋತೃಗಳೂ, ಭಾರತೀಯ ಕಲೆ ಸಂಸ್ಕೃತಿಗಳ ನೈಜ ಶ್ರೇಷ್ಠತೆಯನ್ನು ತಿಳಿಯುವಂತಾಯಿತು.

ಸ್ವಾಮೀಜಿ ಮೈಸೂರಿನಲ್ಲಿದ್ದಾಗ ಮಹಾರಾಜರಾದ ಚಾಮರಾಜ ಒಡೆಯರು ಸ್ವಾಮೀಜಿಯವರ ಬಗ್ಗೆ ಕೇಳಿ ತಿಳಿದು, ಅರಮನೆಗೆ ಆಗಾಗ ಬರಮಾಡಿಕೊಳ್ಳುತ್ತಿದ್ದರು. ಖೇತ್ರಿ ಮಹಾರಾಜರ ಹಾಗೆ ಇವರೂ ಸ್ವಾಮೀಜಿಯ ಅಭಿಮಾನಿಗಳಾಗಿ ಅವರನ್ನು ಭಕ್ತಿ–ಗೌರವಗಳಿಂದ ಕಾಣುತ್ತಿದ್ದರು. ಒಮ್ಮೆ ಮಹಾರಾಜರೊಂದಿಗಿದ್ದಾಗ ಆಸ್ಟ್ರಿಯಾ ದೇಶದ ಖ್ಯಾತ ಸಂಗೀತಗಾರನೊಬ್ಬನ ಪರಿಚಯವಾಯಿತು. ಆತನು ಮಹಾರಾಜರ ಅತಿಥಿಯಾಗಿದ್ದ. ಆತನೊಂದಿಗೆ ಸ್ವಾಮೀಜಿ ಪಾಶ್ಚಾತ್ಯ ಸಂಗೀತದ ಬಗ್ಗೆ ಮಾತಾಡಿದರು. ಆಗ ಪಾಶ್ಚಾತ್ಯ ಸಂಗೀತ ವಿಷಯದಲ್ಲೂ ಸ್ವಾಮೀಜಿಗೆ ಒಳ್ಳೆಯ ಜ್ಞಾನವಿತ್ತು ಎಂಬುದು ತಿಳಿದು ಬಂದು, ಮಹಾರಾಜರು ಬೆರಗಾದರು.

ಮುಂದೆ ಅಮೆರಿಕಾದ ವಿಶ್ವಧರ್ಮಸಮ್ಮೇಳನಕ್ಕೆ ಹೋದಾಗ ಎಲ್ಲಕಡೆ ಆಹ್ವಾನಿತರಾಗಿ ಸ್ವಾಮೀಜಿ ಉಪನ್ಯಾಸಗಳನ್ನು ಕೊಡುತ್ತಾರೆ, ಕ್ರೈಸ್ತ ಮಿಷನರಿ ಸಂಘವೊಂದು ಸ್ವಾಮೀಜಿಯ ವಾಕ್ಪಟುತ್ವವನ್ನು ಸ್ವಲಾಭಕ್ಕೆ ಬಳಸಿಕೊಳ್ಳುತ್ತಿದ್ದುದು ಆಮೇಲೆ ಬಯಲಾಗುತ್ತದೆ. ಈ ಸಂದರ್ಭದಲ್ಲಿ ಒಮ್ಮೆ ಡೆಟ್ರಾಯಿಟ್‌ನ ಯುನಿಟೇರಿಯನ್ ಚರ್ಚಿನಲ್ಲಿ ಸ್ವಾಮೀಜಿಯ ಉಪನ್ಯಾಸ ಸಭೆ ಏರ್ಪಾಟಾಗಿತ್ತು. ಚರ್ಚು ಸಭಿಕರಿಂದ ಕಿಕ್ಕಿರಿದು ತುಂಬಿತ್ತು. ಉಪನ್ಯಾಸದ ಜೊತೆಗೆ ಸ್ವಾಮೀಜಿ ರಾಮಸಂಕೀರ್ತನೆಯನ್ನೂ ಮಾಡುತ್ತ ಭಾವಪರವಶರಾಗುತ್ತಾರೆ; ಪದ್ಮಾಸನಸ್ಥರಾಗಿ, ಭಕ್ತಿಭಾವಾಧಿಕ್ಯದಿಂದ ರಾಮನಾಮವನ್ನು ಮತ್ತೆ ಮತ್ತೆ ಉಚ್ಚರಿಸುತ್ತಿದ್ದಾರೆ. ಅರ್ಧನಿಮೀಲಿತ ಕಣ್ಣುಗಳಿಂದ ಆನಂದಾಶ್ರು ಧಾರಾಕಾರವಾಗಿ ಅವರ ಕೆನ್ನೆಗಳ ಮೇಲುರುಳುತ್ತಿದ್ದು, ತೇಜೋದೀಪ್ತರಾಗಿ ಧ್ಯಾನಸ್ಥರಾಗಿದ್ದ ಆ ಅಪೂರ್ವ ದೃಶ್ಯವನ್ನು ಸ್ವಾಮೀಜಿಯವರ ಒಬ್ಬ ಅಮೆರಿಕಾ ಅಭಿಮಾನಿ, ಅವರ ನೆನಪುಗಳನ್ನು ಬರೆಯುವ ಸಂದರ್ಭದಲ್ಲಿ ಬಣ್ಣಿಸಿದ್ದಾರೆ.

ಸ್ವಾಮೀಜಿ ಹಾಡುವುದಿರಲಿ, ಬರೀ ಮಾತನಾಡಿದರೂ ಅದರಲ್ಲಿ ಸೊಗಸಾಗಿ ಶ್ರುತಿ ಮಾಡಿದ ತಂತಿವಾದ್ಯದಿಂದ ಹೊರಹೊಮ್ಮುವ ಮಾಧುರ್ಯವಿರುತ್ತಿತ್ತಂತೆ.

ಸ್ವಾಮೀಜಿ ಗಾಯಕರು ಮಾತ್ರವಲ್ಲ, ಸಂಗೀತಶಾಸ್ತ್ರ ಮತ್ತು ಹಾಡುವ ಕ್ರಮದ ಕಲೆಗಳ ಬಗ್ಗೆಯೂ ವಿಷಯ ಸಂಗ್ರಹ ಮಾಡಿ ತಮ್ಮ ಯೌವನದ ಪ್ರಾಯದಲ್ಲಿಯೇ ಒಂದು ಪುಸ್ತಕವನ್ನೂ ಬರೆದಿದ್ದಾರೆ. ಅವರು ಬಂಗಾಳಿಯಲ್ಲಿ ಬರೆದ 'ಸಂಗೀತ ಕಲ್ಪತರು' ಎಂಬ ಪುಸ್ತಕವನ್ನು ೧೮೮೭ರಷ್ಟು ಹಿಂದೆಯೇ ವೈಷ್ಣವಚರಣ ಬಾಸಾಕ್ ಎಂಬುವವರು ಪ್ರಕಟಿಸಿದ್ದರು. ಅದರ ಪೀಠಿಕೆಯಲ್ಲೇ ಹಾಡುಗಾರಿಕೆ ಹಾಗೂ ಸಂಗೀತವಾದ್ಯಗಳ ಬಗ್ಗೆ ವಿಸ್ತಾರವಾಗಿ ಬರೆದಿರುವುದರಲ್ಲಿ ನರೇಂದ್ರನ (ಅಂದರೆ ಸ್ವಾಮೀಜಿಯ) ಅಗಾಧವಾದ ಸಂಗೀತಶಾಸ್ತ್ರಜ್ಞಾನ ಮತ್ತು ಅದರ ಸೂಕ್ಷ್ಮ ಒಳನೋಟ ವ್ಯಕ್ತವಾಗುತ್ತವೆ. ಪುಸ್ತಕದ ಒಂದು ಭಾಗ ಭಾರತದ ಸ್ಫೂರ್ತಿದಾಯಕವಾದ ಭಕ್ತಿಗೀತೆಗಳ ಹಾಗೂ ಕೀರ್ತನೆಗಳ ಸಂಗ್ರಹವಾಗಿದೆ. ಅಲ್ಲದೆ ಆ ಗೀತೆಗಳ ರಚನೆಕಾರರ, ವಾಗ್ಗೇಯಕಾರರ ಸಂಕ್ಷಿಪ್ತಜೀವನ ಪರಿಚಯ ಸಹ ಪುಸ್ತಕದ ಅನುಬಂಧದಲ್ಲಿದೆ. ಇನ್ನೂ ಒಂದು ಮಾತು ಹೇಳಬಹುದು. ಈ ಸಂಗೀತದ ಪುಸ್ತಕವನ್ನು ಕಿರಿಯ ಪ್ರಾಯದ ನರೇಂದ್ರ ತಾನೇ ಬಡತನ – ಹಸಿವೆಗಳಿಂದ ಒದ್ದಾಡುತ್ತಿದ್ದ ಕಾಲದಲ್ಲಿ, ತನ್ನ ಪ್ರಕಾಶಕ ಮಿತ್ರನಿಗೆ ಆರ್ಥಿಕ ನೆರವು ನೀಡುವುದಕ್ಕೆಂದೇ ಸಿದ್ಧಪಡಿಸಿದನಂತೆ. ಇದಲ್ಲದೆ, ಸ್ವಾಮೀಜಿಯೇ ಸ್ವತಃ ವಾಗ್ಗೇಯಕಾರರಾಗಿ ಅನೇಕ ಸಂಗೀತಕೃತಿಗಳನ್ನೂ ರಚಿಸಿರುವುದೂ ತಿಳಿದುಬಂದಿದೆ.

ಸಾಹಿತ್ಯ – ಸಂಗೀತಾದಿ ಸರ್ವಕಲೆಗಳ ಅಧಿದೇವತೆ ಸರಸ್ವತಿ ಮಾತೆ ತನ್ನ ವಾತ್ಸಲ್ಯವನ್ನು ಸ್ವಾಮಿ ವಿವೇಕಾನಂದರ ಮೇಲೆ ಸಮೃದ್ಧವಾಗಿ ಸುರಿಸಿದ್ದಾಳೆ. ಇದಕ್ಕೆ ಪೂರಕವಾಗಿ, ಶ್ರೀರಾಮಕೃಷ್ಣ – ಶ್ರೀಶಾರದಾ ಮಾತೆಯವರ ಕೃಪೆ ಸ್ವಾಮೀಜಿಯ ಜೀವನದುದ್ದಕ್ಕೂ ಪ್ರೇರಕ ಶಕ್ತಿಯಾಗಿ, ಮಾರ್ಗದರ್ಶಕ ಬೆಳಕಾಗಿ ಹರಿದಿದೆ. ಇದು ಅವರ ಬಹುಮುಖ ಪ್ರತಿಭೆಗೆ, ವಿಶೇಷವಾಗಿ ಸಂಗೀತ ಪ್ರತಿಭೆಗೆ ಪೋಷಕವಾಗಿದ್ದಂತಿದೆ.

**ಎದ್ದುನಿಂತು ಹೋರಾಡು! ಒಂದು ಹೆಜ್ಜೆಯೂ ಹಿಂದಿಡಬೇಡ, ಇದೇ ನಿನ್ನ ಭಾವನೆಯಾಗಲಿ. ಏನಾದರೂ ಆಗಲಿ, ಹೋರಾಟ ಮಾಡಿಯೇ ತೀರು. ಆಕಾಶದಿಂದ ನಕ್ಷತ್ರಗಳೇ ಅಲ್ಲಾಡಲಿ! ಇಡೀ ಪ್ರಪಂಚವೇ ನಮಗೆ ಪ್ರತಿಯಾಗಿರಲಿ! ಸಾವೆಂದರೆ ಬಟ್ಟೆಯನ್ನು ಬದಲಿಸುವುದು, ಅಷ್ಟೇ. ಅದರಿಂದ ಏನು? ಹೀಗಾಗಿ ಹೋರಾಡು!**

***– ಸ್ವಾಮಿ ವಿವೇಕಾನಂದ***

# ನಾನು ಸ್ವಾಮಿ ವಿವೇಕಾನಂದರನ್ನು ಮೆಚ್ಚುವುದೇಕೆ?



**ಸ್ವಾ**ಮಿ ವಿವೇಕಾನಂದ ! ಭಾರತೀಯ ಋಷಿವರ್ಯರ ಸಂಯಮ ಹಾಗೂ ತ್ಯಾಗದ ವಿಚಾರಧಾರೆಯನ್ನು ಭೋಗಭೂಮಿಯಾದ ಪಾಶ್ಚಿಮಾತ್ಯ ದೇಶಗಳಲ್ಲಿ ಬಿತ್ತರಿಸಿದ ವೀರಸಂನ್ಯಾಸಿ! ಅಸ್ಪೃಶ್ಯತೆ ಮೊದಲಾದ ಅನಾಚಾರಗಳ ಕತ್ತಲೆಯಲ್ಲಿ ನಿದ್ರಿಸಿದ್ದ ಭಾರತೀಯರನ್ನು ಬಡಿದೆಬ್ಬಿಸಿ ಜ್ಞಾನದ ದೀವಟಿಗೆಯನ್ನು ಕೈಯ್ಯಲ್ಲಿ ಇಕ್ಕಿದ ಭಾರತಾಂಬೆಯ ಹೆಮ್ಮೆಯ ಪುತ್ರ! ಆಧುನಿಕ ಭಾರತ ಕಂಡ ಸರ್ವಧರ್ಮ–ಸಮನ್ವಯಯೋಗಿ! ಶ್ರೀರಾಮಕೃಷ್ಣ ಪರಮಹಂಸರ ಯೋಗಶಕ್ತಿಗೆ ಕ್ರಿಯಾರೂಪವನ್ನು ಕೊಟ್ಟ ಶ್ರೀರಾಮಕೃಷ್ಣ ಮಿಷನ್ ಮಹಾಸಂಸ್ಥೆಯ ಸಂಸ್ಥಾಪಕ. ದಣಿದು ನಿದ್ರೆಗೆ ಜಾರಿದ ಸಿಂಹದಂತೆ, ಇಹಲೋಕದಲ್ಲಿ ವೈರಾಗ್ಯವನ್ನು ಹೊಂದಿ, ಪರಬ್ರಹ್ಮನಲ್ಲಿ ಬೆರೆತ ಆಧುನಿಕಕಾಲದ ಆದರ್ಶ ಮುಮುಕ್ಷು!

೩೯ ವರ್ಷ ಬದುಕಿದ ವಿವೇಕಾನಂದರು ಹೊರಜಗತ್ತಿಗೆ ಪರಿಚಯವಾದದ್ದು ಕೇವಲ ಒಂಬತ್ತು ವರ್ಷ. ಇಷ್ಟರಲ್ಲಿಯೇ ಸ್ವಾಮೀಜಿ ಭಾರತದೇಶದ ಜಾಗತಿಕ ಮುಖವಾಗಿದ್ದರು. ಸ್ವಾಮೀಜಿಯ ವ್ಯಕ್ತಿತ್ವ ಹಾಗೂ ವಿದೇಶಗಳಲ್ಲಿ ಅವರು ಮಾಡಿದ ಭಾಷಣಗಳು, 'ಭಿಕ್ಷುಕರ ನಾಡು' ಎಂದು ಹಿಂದೂಸ್ಥಾನವನ್ನು ಅಣಕಿಸುತ್ತಿದ್ದ ವಿದೇಶಿಯರು, 'ಸಂತರ ನಾಡು' ಎಂದು ಉದ್ಗರಿಸುವಂತೆ ಮಾಡಿತ್ತು!

ಚಿಕಾಗೊ ಸಭಾಂಗಣದಲ್ಲಿ ಮೊಳಗಿದ, 'ಸಹೋದರಿಯರೇ, ಸಹೋದರರೇ!' ಎಂಬ ಸಂಬೋಧನೆಯೊಂದರಿಂದಲೇ ಭಾರತೀಯ ಸಂಸ್ಕೃತಿಯ ಪರಿಮಳ ಪಾಶ್ಚಿಮಾತ್ಯ ಸಭಿಕರಿಗೆ ಬಡಿದಿತ್ತು! ಮುಂದೆ, ಎಲ್ಲಾ ಧರ್ಮದ ಮಾರ್ಗಗಳು ಒಂದೇ ದೇವರಲ್ಲಿ ಸೇರುತ್ತವೆ ಎಂಬ ಪ್ರಾಚೀನಶ್ಲೋಕವೊಂದನ್ನು ಉದ್ಧರಿಸಿ, ವಿವರಿಸಿದರು. ಈ ಉಕ್ತಿಯಲ್ಲಿ ಸಭಿಕರು ಆ ಪರಿಮಳಕ್ಕೆ ಮೂಲವಾದ ಮಕರಂದವನ್ನೇ ಕಂಡರು!

ಲೋಕದ ಮುಂದೆ ಹಿಂದೂ ಧರ್ಮವನ್ನು ಹೇಗೆ ಪ್ರತಿಪಾದಿಸಬೇಕು ಎಂಬುದನ್ನು ನಾವು ವಿವೇಕಾನಂದರಿಂದಲೇ ಕಲಿಯಬೇಕು. ಆ ವೇದಿಕೆಯಲ್ಲಿ ಉಳಿದ ಎಲ್ಲ ಪ್ರತಿನಿಧಿಗಳ ಮಾತೂ ಜಾಹಿರಾತಿನಂತೆ ಇದ್ದವು. ಆದರೆ ಸರ್ವಧರ್ಮ ಸಮ್ಮೇಳನದ ಆಯೋಜಕರ ಉದ್ದೇಶವು ಸಫಲವಾದದ್ದೇ, ಸ್ವಾಮೀಜಿಯ ಪ್ರವಚನದಿಂದ. ಆ ನುಡಿಯು ಬೇರೆಲ್ಲ ಪ್ರತಿನಿಧಿಗಳ ಶಬ್ದಜಾಲಕ್ಕೆ ಶಿಖರಪ್ರಾಯವಾಗಿ ಹೊಳೆಯುತಿತ್ತು!

ತದನಂದರ ವಿದೇಶದಲ್ಲಿ ಸ್ವಾಮೀಜಿ ನೀಡಿದ ಪ್ರವಚನಗಳಲ್ಲಿ ಗಹನವಾದ ಕೇವಲಾದ್ವೈತವು ಮೊಳಗಿತ್ತು. ಕೇವಲಾದ್ವೈತವನ್ನು ಪ್ರತಿಪಾದಿಸಿದವರು ಗೋವಿಂದಪಾದರು. ಅವರ ಶಿಷ್ಯರಾದ ಶಂಕರಾಚಾರ್ಯರು, ತಮ್ಮ ವಾದದಿಂದ ತಾರ್ಕಿಕವಾಗಿ ಪಂಡಿತ ಲೋಕವನ್ನು ಗೆದ್ದರು. ವಿಜ್ಞಾನಿಗಳು, ಪಂಡಿತರಿಂದ ಹಿಡಿದು ಸಾಮಾನ್ಯ ಜನರಿಗೂ ಸಹ ತಿಳಿಯುವ ಹಾಗೆ ವೈಜ್ಞಾನಿಕವಾಗಿ ಹಾಗೂ ಮನಶ್ಶಾಸ್ತ್ರಪರವಾಗಿ ಅದ್ವೈತವನ್ನು ಕಲಿಸಿ, ಸ್ವಾಮಿ ವಿವೇಕಾನಂದರು ಜನ–ಮನ ಗೆದ್ದರು. ಇದು ಭಾರತೀಯರ ಧಾರ್ಮಿಕ ವಿಚಾರಶೈಲಿಯನ್ನೇ ಬದಲಾಯಿಸಿತು!

'ಎಲ್ಲವೂ ಮಾಯೆ', 'ಎಲ್ಲವೂ ಅವರವರ ಕರ್ಮ' ಎಂದು ನಂಬಿ ನಿಸ್ತೇಜರಾದ ಭಾರತೀಯರಿಗೆ, 'ಪುರುಷಪ್ರಯತ್ನದಿಂದ ಅವರವರ ಕರ್ಮದ ನಾಶ' ಎಂಬ ಕರ್ಮಸಿದ್ಧಾಂತದ ಉತ್ತರಭಾಗವನ್ನು ತಿಳಿಸಿ, ಬಡಿದೆಬ್ಬಿಸಿದ್ದು ಸ್ವಾಮಿ ವಿವೇಕಾನಂದರಲ್ಲವೇ? 'ಮ್ಲೇಚ್ಛ (ವಿದೇಶೀ ಜಾತಿಯವನು)' ಎಂಬ ಪದಪ್ರಯೋಗವೇ ಭಾರತೀಯರ ಅಧೋಗತಿಗೆ ಕಾರಣ ಎಂದು ಅವರು ಜರಿದರು. ಸ್ವಾಭಿಮಾನ ಹಾಗೂ ಸಹೋದರಭಾವನೆಯ ಬಾಳಿಗೆ ಕರೆ ನೀಡಿದರು. ಭಾರತೀಯರ ಮೌಢ್ಯ ಆಚಾರಗಳ ಬಗ್ಗೆ ಕಠೋರ ಭಾಷೆಯಲ್ಲಿ ನಿಂದಿಸಿದರೂ, ವಿದೇಶದಲ್ಲಿ ಭಾರತವನ್ನು ಆಕಾಶದೆತ್ತರಕ್ಕೆ ಕೊಂಡಾಡಿದರು!! ಭಾರತೀಯ ಸಂಸ್ಕೃತಿಯ ಮೇಲಿರುವ ಅಭಿಮಾನವು ಹೇಗಿರಬೇಕೆಂದು ಕಲಿಸಿದ್ದೇ ವಿವೇಕಾನಂದರು.

ಹಿಂದೂಗಳ ಅನಾಚಾರಗಳನ್ನು ಸಮರ್ಥಿಸಿಕೊಳ್ಳುವುದರಲ್ಲಿಯೇ ಸಾಂಪ್ರದಾಯಿಕರು ತಮ್ಮ ವೈದಿಕ ಪಾಂಡಿತ್ಯವನ್ನು ವಿನಿಯೋಗಿಸುತ್ತಿದ್ದ ಕಾಲದಲ್ಲಿ, ಮೌಢ್ಯವನ್ನು ಮೌಢ್ಯವೆಂದೇ ಅಂಗೀಕರಿಸಿ, ವೇದದ ಅನರ್ಘ್ಯ ಜ್ಞಾನಬೋಧೆಯನ್ನು ಎತ್ತಿ ತೋರಿಸುವುದು ಹೇಗೆ ಎಂದು ಕಲಿಸಿದ್ದೇ ವಿವೇಕಾನಂದರು.

ಸಾಮಾನ್ಯವಾಗಿ ಸಂತರ ಮಾತುಗಳಲ್ಲಿ ಎರಡು ವಿಧವಾದ, ಮೇಲ್ನೋಟಕ್ಕೆ ಪರಸ್ಪರ ವಿರೋಧವೆನಿಸುವ ಬೋಧನೆಗಳಿರುತ್ತವೆ. ಒಂದು ಲೋಕಕಲ್ಯಾಣಕ್ಕೆ ಪ್ರಚೋದಿಸುವಂಥದ್ದು, ಎರಡನೆಯದು ತ್ಯಾಗದ ವಿಚಾರದ್ದು. ಸಂತರ ಕಾಲಾನಂತರ ಅನುಯಾಯಿಗಳಲ್ಲಿ ಈ ಬೋಧನೆಗಳು ಗೊಂದಲ ಸೃಷ್ಟಿಸುವುದು ಅಧ್ಯಾತ್ಮಲೋಕದಲ್ಲಿರುವ ಒಂದು ಸಮಸ್ಯೆ. ಉದಾಹರಣೆಯಾಗಿ ಬುದ್ಧನು ಕರುಣೆ ಹಾಗೂ ಲೋಕಸಂಗ್ರಹಕಾರ್ಯಗಳಲ್ಲಿ ಆಸಕ್ತಿ ತೋರುತ್ತಲೇ, 'ಸರ್ವಂ ಕ್ಷಣಿಕಂ, ಸರ್ವಂ ಶೂನ್ಯಂ' ಎಂದು ಬೋಧಿಸಿದನು. ಬುದ್ಧನ ಕಾಲಾನಂತರದಲ್ಲಿ ಶಿಷ್ಯವರ್ಗವು ಎರಡು ಗುಂಪುಗಳಾದರು. ಒಂದು ಲೋಕಸಂಗ್ರಹದ ಪರವಾಗಿ, ಮತ್ತೊಂದು ತ್ಯಾಗದ ಪರವಾಗಿ! ಇದೇ ತೊಡಕು ಶ್ರೀರಾಮಕೃಷ್ಣರ ಕಾಲಾನಂತರದಲ್ಲಿಯೂ ಉದ್ಭವಿಸಿತ್ತು. ಆದರೆ ಗುರುದೇವರ ಬೋಧೆಯನ್ನು ಸರಿಯಾಗಿ ತಿಳಿಸಿ ಸೋದರ ಸಂನ್ಯಾಸಿಗಳನ್ನು ವಿಚಲಿತರಾಗದಂತೆ ಒಗ್ಗೂಡಿಸುವುದರಲ್ಲಿ ವಿವೇಕಾನಂದರು ಯಶಸ್ವಿಯಾದರು. ಮೇಲೆ ಹೇಳಿದ ಸಮಸ್ಯೆಯ ಪರಿಹಾರಕ್ಕೆ ವಿವೇಕಾನಂದರ ದೊಡ್ಡ ಕೊಡುಗೆ 'ಪ್ರಾಯೋಗಿಕ ವೇದಾಂತ.'

ಏನಿದು ಪ್ರಾಯೋಗಿಕ ವೇದಾಂತ? ಸಮಭಾವ, ಅಹಿಂಸೆ, ತ್ಯಾಗ ಇತ್ಯಾದಿ ನೈತಿಕ ಮೌಲ್ಯಗಳನ್ನು ಬೋಧಿಸುತ್ತಲೇ ಶ್ರೀಕೃಷ್ಣನ 'ಯುದ್ಧ ಮಾಡು' ಎಂಬ ಕರೆ, ಭಗವದ್ಗೀತೆಯನ್ನು ಅಧ್ಯಯನ ಮಾಡುವ ಸಾಧಕರನ್ನು ಶತಶತಮಾನಗಳಿಂದ ಗೊಂದಲಕ್ಕೀಡುಮಾಡಿದ್ದು ಸತ್ಯ. "ನೀವು ಗೀತೆ ಓದುವ ಬದಲು ಫುಟ್ಬಾಲ್ ಆಡಿರಿ, ಆಗ ಗೀತೆ ಚೆನ್ನಾಗಿ ಅರ್ಥವಾಗುತ್ತದೆ" – ಇದು ಸ್ವಾಮೀಜಿಯ ಪ್ರಾಯೋಗಿಕ ವೇದಾಂತದ ರಹಸ್ಯ! ಆಟದಲ್ಲಿ ನಾವು ಉತ್ಸಾಹದಿಂದ ಹೋರಾಡುತ್ತೇವೆ. ಆದರೆ ಮನಸ್ಸಿನಲ್ಲಿ ದ್ವೇಷವಿರುವುದಿಲ್ಲ. ಆಟ ಮುಗಿದನಂತರ ಗೆಲುವು–ಸೋಲು ಎಲ್ಲಾ ಮರೆತು ಮನೆಗೆ ಹೋಗಿ ನಿದ್ರಿಸುತ್ತೇವೆ–ಮಹಾ ತ್ಯಾಗಿಯ ಹಾಗೆ! ಹೀಗೆ ಲೋಕಸಂಗ್ರಹ ಹಾಗೂ ತ್ಯಾಗ ಎರಡೂ ಇರಬೇಕು. ಕುರುಕ್ಷೇತ್ರದಲ್ಲಿ ಶ್ರೀಕೃಷ್ಣನು ಮಾಡಿದ ಉಪದೇಶವನ್ನು ಸ್ವಾಮೀಜಿ ಮೇಲಿನ ಚುಟುಕು ಮಾತಿನಲ್ಲೇ ವ್ಯಾಖ್ಯಾನಿಸುವ ಪರಿ ನೋಡಿ!

ಸ್ವಾಮೀಜಿ ದೇಹ ತ್ಯಜಿಸಿ ನೂರಾಹತ್ತು ವರ್ಷ ಗತಿಸಿದೆ. ಆದರೆ ಸ್ವಾಮೀಜಿಯ ವಿಚಾರಧಾರೆಯಲ್ಲಿ ಸಹಸ್ರ ಸಹಸ್ರ ಯುವಕರು ರೂಪುಗೊಂಡಿದ್ದಾರೆ. ಸ್ವಾಮೀಜಿ ಇಂದು ನಮ್ಮ ಮುಂದೆಯಿಲ್ಲವಾದರೂ ಅವರ ತೇಜೋವಲಯದಲ್ಲಿ ಇನ್ನೂ ಅನೇಕ ಯುವಕರು ದೀಪದಹುಳುಗಳಂತೆ ಧಾವಿಸುತ್ತಿದ್ದಾರೆ. ಆ ಜ್ಞಾನಾಗ್ನಿಯಲ್ಲಿ ಸ್ವಯಂ ಅರ್ಪಿಸಿಕೊಂಡು ಅಗ್ನಿವರ್ಣದ ಕಾಷಾಯ ಧಾರಿಗಳಾಗುತ್ತಿದ್ದಾರೆ. ಅದೆಂಥ ವ್ಯಕ್ತಿತ್ವ ಸ್ವಾಮಿ ವಿವೇಕಾನಂದರದು!

ಶಿಕಾಗೊ ಧರ್ಮಮಹಾಸಭೆಯ ಆಯೋಜಕರಿಗೆ ಸ್ವಾಮೀಜಿಯ ಪರಿಚಯ ಪತ್ರವನ್ನು ಬರೆದು ಕೊಟ್ಟ ಹಾರ್ವರ್ಡ್ ವಿಶ್ವವಿದ್ಯಾಲಯದ ಜಿ.ಎಚ್. ರೈಟ್ ಹೇಳಿದಹಾಗೆ, ಸ್ವಾಮಿ ವಿವೇಕಾನಂದರನ್ನು ಅಂತರಂಗದಲ್ಲಾದರೂ ಮೆಚ್ಚದೆ ಇರುವವರು ಯಾರುಂಟು ಇಹದಲ್ಲಿ?

**– ಸ್ವಾಮಿ ತೇಜೋಮಯಾನಂದ, ಬಿಜಾಪುರ**

---

'ಪ್ರೇರಣೆ ಮತ್ತು ಪ್ರಭಾವ ಎರಡೂ ಬೇರೆ' ಎಂದು ನನಗೆ ತಿಳಿಸಿದವರು, ವರಕವಿ ಡಾ. ದ.ರಾ.ಬೇಂದ್ರೆ. ಯಾವುದೇ ವ್ಯಕ್ತಿಯ ಪ್ರಭಾವಕ್ಕೊಳಗಾದರೆ, ಸಸಿಗೆ ಬಿರಿಬಿಸಿಲು ಬಿದ್ದಂತೆ; ಪ್ರೇರಣೆಯಾದರೆ ಸಸಿಗೆ ನೀರುಣಿಸಿದಂತೆ, ಸಸಿ ಚಿಗುರೊಡೆದಂತೆ ಎಂದವರು ಮಾರ್ಮಿಕವಾಗಿ ಹೇಳಿದ್ದರು. ಹೀಗಾಗಿ ಸ್ವಾಮಿ ವಿವೇಕಾನಂದರು ನನಗೆ ಪ್ರೇರಣೆ ನೀಡಿದ ಸಂಗತಿಗಳನ್ನು ತಿಳಿಸಲು ಪ್ರಯತ್ನಿಸುವೆನು.

ನನಗೆ ಆಗ ಹತ್ತು ವರ್ಷ. ಸರಕಾರಿ ಗಂಡು ಮಕ್ಕಳ ಶಾಲೆ, ಶಿರಹಟ್ಟಿಯಲ್ಲಿ ನಾಲ್ಕನೆಯ ವರ್ಗದಲ್ಲಿ ಓದುತ್ತಿದ್ದೆ. ನಮ್ಮ ವರ್ಗದ ಗುರುಗಳು ಶ್ರೀ ಅಗಳವಾಡಿಯವರು. ಆಗ ನಾಲ್ಕನೆಯ ವರ್ಗಕ್ಕೆ 'ಸ್ಕಾಲರ್‌ಶಿಪ್ ಪರೀಕ್ಷೆ' ನಡೆಯುತ್ತಿತ್ತು. ವರ್ಗದಲ್ಲಿ ಜಾಣರಿದ್ದವರಿಗೆ 'ಸ್ಕಾಲರ್ ಪರೀಕ್ಷೆಗಾಗಿ' ಆಯ್ಕೆ ಮಾಡಿ, ಶಾಲೆ ಬಿಟ್ಟ ನಂತರ ವಿಶೇಷ ಅಭ್ಯಾಸ ತರಗತಿಗಳನ್ನು ನಡೆಸುತ್ತಿದ್ದರು.

ಶಾಲೆ ಬಿಟ್ಟ ನಂತರ ಊಟಮಾಡಿ, ಕೈಯಲ್ಲಿ ಒಂದು ಚಿಕ್ಕ 'ಲ್ಯಾಂಟರ್ನ್' ಹಿಡಿದು ಸಂಜೆ ೬ .೩೦ ಕ್ಕೆ ಶಾಲೆಗೆ ಹೋಗಬೇಕು. ೬ .೩೦ ರಿಂದ ೮ ಗಂಟೆಯವರೆಗೆ ವಿಶೇಷ ವರ್ಗ ನಡೆಯುತ್ತಿತ್ತು. ನಮ್ಮ ಗುರುಗಳಾದ ಶ್ರೀ ಅಗಳವಾಡಿಯವರ ವಿಶೇಷತೆ ಏನೆಂದರೆ ೬ .೩೦ ರಿಂದ ೭ ಗಂಟೆಯವರೆಗೆ (ಅರ್ಧ ಗಂಟೆ) ಪಠ್ಯೇತರ ವಿಷಯ ಹೇಳಿ, ನಂತರ ಪಾಠ ಪ್ರಾರಂಭಿಸುತ್ತಿದ್ದರು. ಪಠ್ಯೇತರ ವಿಷಯಕ್ಕೆ ಗೈರು ಇದ್ದವರಿಗೆ ಮುಂದಿನ ಪಾಠಕ್ಕೆ ಕೂಡಿಸಿಕೊಳ್ಳುತ್ತಿರಲಿಲ್ಲ. ಹೀಗಾಗಿ ೬ .೩೦ ರಿಂದ ೭ ಗಂಟೆಯವರೆಗೆ ನಡೆಯುವ ವಿಷಯದಲ್ಲಿ ಪ್ರಧಾನವಾಗಿ ಸ್ವಾಮಿ ವಿವೇಕಾನಂದರ ಬಾಲ್ಯಜೀವನ, ಪರಮಹಂಸರ ಕಥೆಗಳನ್ನು ಹೇಳುತ್ತಿದ್ದರು. ನಮ್ಮಲ್ಲಿ ಅಭಿರುಚಿ ಹುಟ್ಟುವಂತೆ ಮಾಡಿ, ಏಕಾಗ್ರತೆ, ಸಾಮರ್ಥ್ಯ, ಸಾಧನೆ ಮತ್ತು ಸಮಾಜಕ್ಕೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳುವ ತ್ಯಾಗ ಮನೋಭಾವವನ್ನು ಬೆಳೆಸುತ್ತಿದ್ದರು.

ವಿವೇಕಾನಂದರ ಪೂರ್ವನಾಮ ನರೇಂದ್ರನಾಥ, ತಂದೆ ವಿಶ್ವನಾಥದತ್ತ, ತಾಯಿ ಭುವನೇಶ್ವರಿದೇವಿ ಎಂದು ಹೇಳುತ್ತ, ವಿವೇಕಾನಂದರು ಧ್ಯಾನಕ್ಕೆ ಕುಳಿತಾಗ ಹಾವು ಬಂದರೂ ಎಚ್ಚರವಿರದಂತೆ ಏಕಾಗ್ರತೆಯಿಂದ ಧ್ಯಾನಕ್ಕೆ ಕುಳಿತದ್ದನ್ನು ಹೇಳಿದ್ದು ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ವಿವೇಕಾನಂದರನ್ನು ಒಂದು ದೊಡ್ಡ ಕೋತಿ ಬೆನ್ನಟ್ಟಿದಾಗ ಭಯದಿಂದ ಓಡುತ್ತಿದ್ದರು, ಆಗ ಒಬ್ಬ ಸಾಧುಗಳು "ವೈರಿಗೆ ಬೆನ್ನು ತೋರಿಸಬೇಡ, ಎದುರಾಗಿ ನಿಲ್ಲು" ಎಂದರು. ಆಗ ವಿವೇಕಾನಂದರು ಓಡುವುದನ್ನು ನಿಲ್ಲಿಸಿ ಆ ಕೋತಿಗೆ ಎದುರಾಗಿ ನಿಂತರು. ಆಗ ಆ ಕೋತಿ 'ಕಕ್ಕಾವಿಕ್ಕಿಯಾಗಿ ನಿಂತ ದೃಶ್ಯ'ದ ಬಗ್ಗೆ ನಮ್ಮ ಗುರುಗಳು ವರ್ಣಿಸಿದ್ದು ವಿವೇಕಾನಂದರನ್ನು ಮರೆಯದಂತೆ ಮಾಡಿತು.

ತಂದೆ, ತುಂಬ ದಾನ ಮಾಡಿದಾಗ, "ನನಗೇನು ಕೊಟ್ಟಿರುವೆ?"

ಎಂದು ನರೇಂದ್ರ ಕೇಳುತ್ತಾನೆ. ಆಗ ತಂದೆ ಮಗನ ರಟ್ಟೆ ಹಿಡಿದುಕೊಂಡು ಕನ್ನಡಿ ಮುಂದೆ ನಿಲ್ಲಿಸಿ, "ನೋಡು ಈ ಕನ್ನಡಿಯಲ್ಲಿ ಕಾಣುವ ಕಣ್ಣುಗಳಿವೆ, ಕೇಳುವ ಕಿವಿಗಳಿವೆ, ಶರೀರ ಸಂಪತ್ತಿದೆ, ನಿನಗೆಲ್ಲವನ್ನೂ ಕೊಟ್ಟಿದ್ದೇನೆ. ಅವುಗಳ ಸರಿಯಾದ ಬಳಕೆ ಮಾಡಿಕೋ" ಎಂದು ಹೇಳುತ್ತಾರೆ. ಹೀಗೆ ವಿವೇಕಾನಂದರು ಮಹಾಪುರುಷರ ಸಾಲಿಗೆ ಏರಿದ ಬಗ್ಗೆ ವಿವರಿಸಿದ ನಮ್ಮ ಗುರುಗಳ ಮಾತು ನನ್ನ ಕಿವಿಯಲ್ಲಿ ಇನ್ನೂ ಗುನುಗುನಿಸುತ್ತಿದೆ.

ಸ್ವಾಮಿ ವಿವೇಕಾನಂದರ ಮಾತೃಭಕ್ತಿ, ಗುರುಭಕ್ತಿ, ದೇಶಭಕ್ತಿಗಳ ಬಗ್ಗೆ ನನ್ನ ತಾಯಿಯಿಂದ ಕೇಳಿ ತಿಳಿಯುತ್ತಿದ್ದೆ. ೯ನೇ ವರ್ಗದ ಅಂತ್ಯದಲ್ಲಿ ನನ್ನ ತಂದೆಯನ್ನು ಕಳೆದುಕೊಂಡಾಗ, ವಿವೇಕಾನಂದರು ಕೂಡ ತಮ್ಮ ತಂದೆಯನ್ನು ಕಳೆದುಕೊಂಡು ಕಷ್ಟಪಟ್ಟದ್ದನ್ನೂ, ಜೀವನ ಎದುರಿಸಿದ ರೀತಿಯನ್ನೂ, ಸಮಾಜದ ಉದ್ಧಾರಕ್ಕಾಗಿ ದುಡಿದಿದ್ದನ್ನೂ ತಾಯಿ ಆಗಾಗ ಹೇಳಿ ನಮ್ಮನ್ನೆಲ್ಲ ಪ್ರೋತ್ಸಾಹಿಸುತ್ತಿದ್ದಳು.

ವಿವೇಕಾನಂದರು ಮೂಢನಂಬಿಕೆಯನ್ನು ಒಪ್ಪುತ್ತಿರಲಿಲ್ಲ. ತರ್ಕ ಮಾಡಿ, ಸತ್ಯವೆಂದು ಕಂಡುಬಂದುದನ್ನು ಧೈರ್ಯವಾಗಿ ಇತರರಿಗೆ ಹೇಳುತ್ತಿದ್ದರು. ಇದು ನನ್ನ ಮೇಲೆ ಬಹಳ ಪ್ರಭಾವ ಬೀರಿತು.

ಕೇವಲ ಜ್ಞಾನವಿದ್ದರೆ ಮಾತ್ರ ಸಾಲದು, ದೈಹಿಕವಾಗಿಯೂ ಸದೃಢವಾಗಿರಬೇಕೆಂಬುದನ್ನು ನನ್ನ ತಂದೆಯವರಿಂದ ಕಲಿತಿದ್ದೆ. ಚಿಕ್ಕವನಿದ್ದಾಗ ನಾನು ನಸುಕಿನಲ್ಲಿ ಮಲ್ಲಕಂಭ, ಯೋಗಾಸನ, ಈಜುವಿಕೆ, ಡಬಲ್‌ಬಾರ್, ಸಿಂಗಲ್‌ಬಾರ್ ಮಾಡುತ್ತಿದ್ದೆ. ಗರಡಿ ಮನೆಗೆ ಕುಸ್ತಿ ಆಡಲು ಅಣ್ಣನೊಂದಿಗೆ ಹೋಗುತ್ತಿದ್ದೆ, ಗುಂಪಿನಲ್ಲಿ ಆಟವಾಡುತ್ತಿದ್ದೆ. ಸ್ವಾಮಿ ವಿವೇಕಾನಂದರೂ ಬಾಲ್ಯದಲ್ಲಿ ಅವುಗಳನ್ನು ಮಾಡುತ್ತಿದ್ದ ವಿಷಯ ಗುರುಗಳಿಂದ ತಿಳಿದು ಹೆಮ್ಮೆಪಟ್ಟುಕೊಂಡೆನು. ಅವರ ಚಿತ್ರದಲ್ಲಿ ಕಂಡುಬರುವ ನಿಂತ ನಿಲುವು ನನಗೆ ಪ್ರೇರಣೆ ನೀಡುತ್ತಿತ್ತು. ಏಳನೆಯ ವರ್ಗದವನಿದ್ದಾಗ, ಒಂದು ರವಿವಾರ, ನನ್ನ ವರ್ಗದ ಕೋಣೆಯ ಗೋಡೆಯ ಮೇಲೆ, ಶಿಕ್ಷಕರ ಅಪ್ಪಣೆ ಇಲ್ಲದೇ, ನಾಲ್ಕು ಅಡಿ ಎತ್ತರದ ವಿವೇಕಾನಂದರ ಎದೆಯೆತ್ತರದ ಚಿತ್ರ ಬಿಡಿಸಿದ್ದೆ. ಮರುದಿನ (ಸೋಮವಾರ) ಮುಖ್ಯಗುರುಗಳು (ಶ್ರೀ ಎಸ್.ಎಸ್.ಹಿರೇಮಠ) ಮತ್ತು ವರ್ಗದ ಗುರುಗಳಾದ ಜಿ.ಕೆ.ಪಾಟೀಲ ಗುರುಗಳು ಎಲ್ಲರನ್ನೂ ಕರೆದು ಆ ಚಿತ್ರವನ್ನು ತೋರಿಸಿ, ಸಾಮೂಹಿಕ ಪ್ರಾರ್ಥನೆಯಲ್ಲಿ ನನಗೆ ಅಭಿನಂದಿಸಿದಾಗ ನನಗೆ ಆದ ಆನಂದ ಅಪಾರ. ಅದಕ್ಕಿಂತಲೂ ಹೆಚ್ಚಾಗಿ, ಆ ಚಿತ್ರದಲ್ಲಿ ಸ್ವಾಮಿ ವಿವೇಕಾನಂದರು ಎದೆ ಸೆಟೆಸಿ 'ಶಭಾಶ್' ಎಂದಂತೆ ಭಾಸವಾಗುತ್ತಿತ್ತು.

ಹೈಸ್ಕೂಲ್‌ನಲ್ಲಿದ್ದಾಗ (ಎಫ್.ಎಮ್.ಡಬಾಲಿ ಹೈಸ್ಕೂಲ್) ವಿವೇಕಾನಂದರ ಪುಸ್ತಕ ಓದಿದೆ. ಧಾರವಾಡಕ್ಕೆ ೧೯೬೬ಕ್ಕೆ ಬಂದಾಗ, ಬೇಂದ್ರೆಯವರ ಪರಿಚಯ ಮತ್ತು ಒಡನಾಟ ದೊರಕಿತು. ದ.ರಾ.ಬೇಂದ್ರೆಯವರು ವಿವೇಕಾನಂದರ ಬಗ್ಗೆ ಬರೆದ ಕೆಲವು ಸಾಲುಗಳು ಹೀಗಿವೆ:

**ಶ್ರೀ ವಿವೇಕಾನಂದ ಶಿಖರ ಪ್ರಗಾಥಾ ಕವನದಲ್ಲಿ :**

....... 'ಅದೋ! ವಿವೇಕಾನಂದ ನೀಡಿದರು ದಾರಿ,
ಉದಾರಿ ಶಿಖರದಿಂ ಶಿಖರಕ್ಕೆ ಹಾರಿ'

ಈ ಹಾದಿ, ಅನಾದಿ, ಹೃದಯ ಸಂವಾದಿ
ಸುನಾದಿ, ಸರಿಗಮ ಸನಾದಿ, ವಿಜ್ಞಾನ–ಬೋಧಿ
ಸಂಜ್ಞಾನ–ಸಂಬೋಧಿ;

**'ಓ ಭಾರತ ಸಂಚಾರಿಣಿ'** ಕವನದಲ್ಲಿ ಶ್ರೀರಾಮಕೃಷ್ಣ, ಶ್ರೀಶಾರದಾ ಮಾತೆ ಹಾಗೂ ಸ್ವಾಮಿ ವಿವೇಕಾನಂದರ ತ್ರಿವೇಣಿ ಸಂಗಮ ಚಿಂತನವನ್ನು ಕಂಡೆ.

ಅಧ್ಯಾತ್ಮ ಸಂಪದದ ಪಯಿರಾಗಿರಿ
ಭಾರತದ ಸೇವೆಗೋ ಮುಂದಾಗಿರಿ
ಅಭ್ಯುದಯ ನಿಶ್ರೇಯ ಸಂದಾಗಿರಿ–
ತತ್ವದಕೆ ಸತ್ವದಕೆ ತಲೆ ಬಾಗಿರಿ.

ಆ–ವಿವೇಕ–ಲಹರಿ ಅದು, ಪ್ರತಿ ಪ್ರಹರಿ, ಪ್ರಹರೀ
ಗಳಿಗೆ ಗಳಿಗೆ ಘಟ ಘಟ ಪ್ರಸ್ತರೀ, ಇದು ಮಹಾಪಹಾರೀ
ನಂದ ಕಂದ ಲಹರಿ! ಸ್ಕಂದ ಶಿಲಾಲಹರೀ! ಸ್ವಾಽನಂದ ಲಹರಿ।
ನಿಃಸ್ವಾನಂದ ಲಹರಿ।

ಹೃದಯದಳಂದೆಯ ಮುಟ್ಟಿದ್ದೆ...
ಭರತಖಂಡದಾ ಉತ್ತರವನ್ನು, ಧ್ರುವಮಂಡಲದಾ ಎತ್ತರವನ್ನು
ಗೊಮ್ಮಟ್ಟನಾಗಿ ತಟ್ಟಿದ್ದೆ.
ಕನ್ಯಾಕುಮಾರಿಯಲಿ ಮುಳುಗಿದ್ದೆ !। ಕಾಶ್ಮೀರದ ಒಳಗಿದ್ದೆ !
ಶ್ರೀ ಗುರುವಿನ ಬಳಿಯಿದ್ದೆ.....

ಆ ದಿವ್ಯಧ್ವನಿ ಕೇಳಿ। ಏಳಿ, ಏಳಿ, ಏಳಿ
ಎತ್ತರಕೇಳೀ, ಉತ್ತರಕೇಳೀ, ಆ ಬಿತ್ತರ ಕೇಳೀ.....

ಬೇಂದ್ರೆಯವರು ವಿವೇಕಾನಂದರ ಬಗ್ಗೆ ಬರೆದ ಮೇಲಿನ ಕೆಲವು ಸಾಲುಗಳು ನನ್ನನ್ನು ಚಿಂತನೆಗೆ ಹಚ್ಚಿದವು. ವಿವೇಕಾನಂದರ ಬಗ್ಗೆ ಒಂದೆರಡು ಕಡೆಗೆ ಮಾತನಾಡಿದಾಗ ಅನೇಕರು ನನಗೆ ವಿವೇಕಾನಂದರ ಪುಸ್ತಕಗಳನ್ನು ಕೊಡುಗೆಯಾಗಿ ಕೊಡತೊಡಗಿದರು. ಅವನ್ನೂ ಓದಿದೆ. ಮತ್ತೆ ಕೊಂಡೂ ಓದಿದೆ. ಶಾಲಾ ಮಕ್ಕಳಿಗೆ ಓದಲು ವಿವೇಕಾನಂದರ ಪುಸ್ತಕಗಳನ್ನು ಕೊಡುತ್ತಿದ್ದೆ.

"ಮಹಾಶಕ್ತಿ ನಿನ್ನೊಳಗೆ ಇದೆ, ಏಳು, ಎಚ್ಚರಗೊಳ್ಳು, ಗುರಿಮುಟ್ಟುವವರೆಗೆ ನಿಲ್ಲಬೇಡ" ಎಂಬ ವಿವೇಕವಾಣಿ ಲಕ್ಷಾವಧಿ ಜನರನ್ನು ಪ್ರೇರೇಪಿಸುವಂತೆ, ನನಗೂ ಪ್ರೇರೇಪಿಸಿದೆ. ಶ್ರೀರಾಮಕೃಷ್ಣ ಆಶ್ರಮದ ಸಾಧು ಸಂತರ ಸಂಪರ್ಕ, ಸತ್ಸಂಗಗಳಿಂದ ಇನ್ನೂ ಕಲಿಯುತ್ತಿದ್ದೇನೆ. ವಿವೇಕ+ಆನಂದ=ವಿವೇಕಾನಂದ ಮಾರ್ಗ ಅಮರವಾದುದು.

ವಿವೇಕಾನಂದರಿಗೆ ಭಾರತೀಯ ಸಂಸ್ಕೃತಿಯ ಬಗ್ಗೆ, ಗುರುಪರಂಪರೆಯ ಬಗ್ಗೆ ಇದ್ದ ಗೌರವ, ಮಾತೃಭಕ್ತಿ, ಗುರುಭಕ್ತಿ, ದೇಶಭಕ್ತಿ, ಸಮಾಜಕ್ಕೆ ತಮ್ಮನ್ನು ಅರ್ಪಿಸಿಕೊಂಡ ತ್ಯಾಗ ನನಗೆ ಅನುಕರಣೀಯವೆನಿಸಿವೆ. ಸಮರ್ಥರಾಗಿ (ಶಾರೀರಿಕ, ಬೌದ್ಧಿಕ, ಮಾನಸಿಕ ಮತ್ತು ಆಧ್ಯಾತ್ಮಿಕವಾಗಿ) ಬೆಳೆದು, ನಮ್ಮಲ್ಲಿ ಅಡಗಿರುವ ಶಕ್ತಿಯನ್ನು ಬಡಿದೆಬ್ಬಿಸಿ, ಕ್ಷಣಕ್ಷಣವೂ ಚೈತನ್ಯಯುತರಾಗಿ ಬಾಳುವಂತೆ ಮಾಡುವ ಅವರ ವಾಣಿ ಬಾಲಕರಿಂದ ವೃದ್ಧರವರೆಗೂ ದಾರಿದೀಪವಾಗಿದೆ; ಅಮರವಾಣಿಯಾಗಿವೆ. ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಓದಿ ಅನುಷ್ಠಾನಕ್ಕೆ ತರಲು ನನ್ನ ಜೀವನದಲ್ಲಿ ಪ್ರಯತ್ನಿಸುತ್ತಿರುವೆ. **– ಸುರೇಶ ವಿ. ಕುಲಕರ್ಣಿ, ಧಾರವಾಡ**

ಆಧುನಿಕ ಭಾರತವು ಕಂಡ ಅಪ್ರತಿಮ ಧೀರ ಸಂನ್ಯಾಸಿ ಸ್ವಾಮಿ ವಿವೇಕಾನಂದ. ಅವರು ಲೌಕಿಕ ಅಲೌಕಿಕಗಳನ್ನು ಅದ್ಭುತವಾಗಿ ಬೆಸೆದ ಪ್ರಾಯೋಗಿಕ ವೇದಾಂತದ ಕೊಂಡಿಯಾಗಿದ್ದರು. ಅವರೊಬ್ಬ ದಣಿವರಿಯದ ಅಧ್ಯಾತ್ಮ ಸಾಧಕ, ಯೋಗಿ, ಸಮಾಜಸುಧಾರಕ, ದ್ರಷ್ಟಾರ, ಕ್ರಾಂತದರ್ಶಿ ಇವೆಲ್ಲವೂ ಏಕತ್ರ ಸಂಭವಿಸಿದ್ದ ಧೀರ ಚೇತನ. ಇಂಥ ದುರವಗಾಹ್ಯವೂ ದುರ್ಗಮ್ಯವೂ ಆದ ಗಂಭೀರ ವ್ಯಕ್ತಿತ್ವವನ್ನು 'ನಾನು ಕಂಡಂತೆ' ಎಂದು ಕಲ್ಪಿಸಿಕೊಳ್ಳುವುದೇ ಅಸಂಗತ. ಮೊದಲ ಬಾರಿ ಸಂತೆಗೆ ಹೋಗಿ ಬಂದ ಮಗುವೊಂದು ತನ್ನ ತೊದಲ್ನುಡಿಯಲ್ಲಿ, ತಾನು ಕಂಡದ್ದನ್ನು, ಕಂಡೆನೆಂದುಕೊಂಡದ್ದನ್ನು ವಿವರಿಸುವ ಪರಿಯಂತೆ ಈ ಪ್ರಯತ್ನ.

ಸ್ವಾಮಿ ವಿವೇಕಾನಂದರು, ನನಗೆ ನೆನಪಿರುವಂತೆ, ನಮ್ಮ ಶಾಲಾಕಾಲೇಜುಗಳ ಪಠ್ಯಗಳ ಭಾಗವಾಗಿರಲಿಲ್ಲ. ನಾವು ಓದಿದ್ದು, ಕೇಳಿದ್ದು ಎಲ್ಲವೂ ನಮ್ಮ ಆಸಕ್ತಿಯಿಂದ, ನಮ್ಮ ಪುಣ್ಯದಿಂದ. ಆದರೂ ಬಾಲ್ಯದಿಂದ ನಮ್ಮ ವಿವೇಕಾನಂದರು ಎಂದರೆ ತುಂಬುತೋಳಿನ, ತುಂಬುಕತ್ತಿನ, ತುಂಬು ಗಾಂಭೀರ್ಯದ, ನಕ್ಕೂ ನಗದಂತಿರುವ, ಆದರೂ ಎಲ್ಲರನ್ನೂ ಮೋಡಿ ಮಾಡುವಂತೆ ಸೆಳೆಯುವ, ಕತ್ತನ್ನು ತುಸು ಎಡಭಾಗಕ್ಕೆ ಬಾಗಿಸಿದ, ಪೇಟ ಧರಿಸಿದ ಚಿತ್ರವೇ. ಇದಕ್ಕೆ ತಿಲಕಪ್ರಾಯವಾಗಿ ಹಣೆಯ ಮಧ್ಯೆ ನುಸುಳಿನಿಂತಿರುವ ಒಂದೆರಡು ಗುಂಗುರು ಕೂದಲುಗಳು ! ಕಣ್ಣಿನಲ್ಲಿ ಆತ್ಮಪ್ರತ್ಯಯ, ಸಿಂಹಸದೃಶ ಕ್ಷಾತ್ರ, ಧೀರಗಂಭೀರ ಮುಖಮಂಡಲ. ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನಿಸುವ ಒಟ್ಟಾರೆ ವ್ಯಕ್ತಿತ್ವ. ಏಕೋ ಏನೋ, ನನಗೆ ಮೊದಲಿನಿಂದಲೂ ರಾಮಕೃಷ್ಣ ಪರಮಹಂಸರಿಗಿಂತ ಸ್ವಾಮಿ ವಿವೇಕಾನಂದರೇ ಪ್ರಿಯವೆನಿಸಿದರು !

ಸ್ವಾಮಿ ವಿವೇಕಾನಂದರು ನಮ್ಮನ್ನು ಮೊದಲ ಬಾರಿಗೆ ಸೆಳೆದದ್ದು ಅವರ ದೇವರ ಹುಡುಕಾಟದ ಅಭಿಯಾನದಿಂದ. ಒಂದು ವಯಸ್ಸಿನಲ್ಲಿ ಬಹುತೇಕ ಎಲ್ಲರಲ್ಲೂ ಇಂಥದೊಂದು ಹುಡುಕಾಟ ಮುಸುಕುಮುಸುಕಾಗಿ ಅರಳುತ್ತದೆ. ಅಷ್ಟೇ ಬೇಗ ಇತರ ಜಂಜಡಗಳಲ್ಲಿ ಅದು ಗುರುತೇ ಸಿಗದಂತೆ ಕರಗಿ ಹೋಗುತ್ತದೆ. ಆದರೆ ಮಹಿಮಾನ್ವಿತರಲ್ಲಿ ಅದು ಹರಳುಗಟ್ಟಿ ನಿಲ್ಲುತ್ತದೆ; ಅಳಿವು–ಉಳಿವಿನ ಪ್ರಶ್ನೆಯಾಗಿ ಕಾಡತೊಡಗುತ್ತದೆ. ಕೊಲ್ಕತಾದ ಕಾಲೇಜು ವಿದ್ಯಾರ್ಥಿ ಹೀಗೆ ದೈವಸನ್ನಿಧಾನವನ್ನು ಹುಡುಕುತ್ತ ಹುಡುಕುತ್ತ ರಾಮಕೃಷ್ಣ ಪರಮಹಂಸರನ್ನು ಭೇಟಿ ಮಾಡುತ್ತಾನೆ. "ದೇವರನ್ನು ನೀವು ನೋಡಿದ್ದೀರಾ?" ಎಂಬ ಪ್ರಶ್ನೆಗೆ ಪರಮಹಂಸರು, "ನಿನ್ನನ್ನು ನೋಡುತ್ತಿರುವ ಹಾಗೆ ದೇವರನ್ನು ನಾನು ನೋಡಿದ್ದೇನೆ" ಎಂದರು. ಎಂಥ ಗುರು, ಎಂಥ ಶಿಷ್ಯ ! ಎಂಥ ಪ್ರಶ್ನೆ, ಎಂಥ ಉತ್ತರ ! ಅದಕ್ಕೂ ಮೊದಲು ಶ್ರೀರಾಮಕೃಷ್ಣರು ನರೇಂದ್ರನನ್ನು ಕೇಳಿದರು, "ಬರುವುದಕ್ಕೆ ಏಕೆ ಇಷ್ಟು ತಡಮಾಡಿದೆ ? ನಾನು ಎಷ್ಟು ದಿನದಿಂದ ನಿನಗಾಗಿ ಕಾಯುತ್ತಿದ್ದೇನೆ!" ಇಂಥ ಗುರು ಶಿಷ್ಯ ಸೇರಿದರೆ ಏನಾಗುತ್ತದೆಯೋ ಅದೇ ಆಯಿತು. ಕೊನೆಗೂ ಶಿಷ್ಯ ಗುರುವನ್ನು ಒಪ್ಪಿಕೊಂಡು, ಗುರು ಶಿಷ್ಯನನ್ನು ಅಪ್ಪಿಕೊಂಡರು. ಶಕ್ತಿಪಾತದ ಮೂಲಕ ನರೇಂದ್ರನಿಗೆ ಬಾಹ್ಯದ ಪ್ರಜ್ಞೆ ಹಾರಿಹೋಯಿತು. ಸಮಾಧಿ ಸ್ಥಿತಿಯಲ್ಲೇ ಬಹಳ ಹೊತ್ತು ನಿಂತರು. ಅಧ್ಯಾತ್ಮದ ರುಚಿ ಹತ್ತಿಸಿದ ಗುರು ಶಿಷ್ಯನನ್ನು ಮತ್ತೆ ಇಹದ ವ್ಯಾಪಾರಕ್ಕೆ ಕರೆದುತಂದರು. ಶಿಷ್ಯನಿಗೋ ತಾನು ಕಂಡ ಹೊಸ ಲೋಕದಲ್ಲಿಯೇ ಸದಾ ಇರುವ ಆಸೆ; ಹೀಗೆಯೇ ಸಮಾಧಿಯಲ್ಲಿಯೇ ಕರಗಿ ಹೋಗುವ ಬಯಕೆ. ಆದರೆ ಪರಮಹಂಸರು ಆತ್ಮೋದ್ಧಾರ, ಸಮಾಧಿ ಇವುಗಳಲ್ಲಿ ಮುಳುಗಿ ಕೇವಲ ತನ್ನ ಮುಕ್ತಿಯನ್ನು ಕಂಡುಕೊಳ್ಳಬಯಸುವುದೂ ಒಂದು ರೀತಿಯ ಸ್ವಾರ್ಥ, ಇತರರಿಗಾಗಿಯೇ ಬದುಕುವುದೇ ನಿಜವಾದ ಪರಾರ್ಥ ಎಂದು ಕಣ್ತೆರೆಸಿದರು; ಅವನನ್ನು ದ್ವಿಜನನ್ನಾಗಿಸಿದರು.

ಸ್ವಾಮಿ ವಿವೇಕಾನಂದರ ಸಾಧನೆಯ ಹಾದಿ ಹೂವಿನ ಹಾಸಿಗೆಯೇನೂ ಆಗಿರಲಿಲ್ಲ. ೧೮೯೩ರಲ್ಲಿ ಶಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಲಾರದ ಅಡೆತಡೆಗಳೆಲ್ಲವನ್ನೂ ದಾಟಿ ಹೋಗಿ ವಿವಿಧ ಧರ್ಮೀಯರು ಇದ್ದ ಆ ಮಹಾಸಭೆಯಲ್ಲಿ ಮಾತನಾಡಿದರು; "ಅಮೆರಿಕದ ನನ್ನ ಸೋದರ ಸೋದರಿಯರೆ" ಎಂಬಷ್ಟೇ ಪದಗಳಿಂದ ಅವರು ಇಡೀ ಜಗತ್ತನ್ನು ಗೆದ್ದುಬಿಟ್ಟರು. ಈ ಸಂತನ ಹೃದಯಾಂತರಾಳದ ಪ್ರೀತಿಯಿಂದ ಅದ್ದಿ ತೆಗೆದ ಈ ಮಾತುಗಳು ಮಾನವ ಜನಾಂಗವನ್ನೇ ಉದ್ದೇಶಿಸಿ ಆಡಿದಂತಿದ್ದವು. ಅವುಗಳ ಕೃಪಾಪ್ರಭಾವದಿಂದ ತಪ್ಪಿಸಿಕೊಳ್ಳಲು ಅವರಾರಿಗೂ ಸಾಧ್ಯವಾಗಲಿಲ್ಲ. ನೂರಾರು ಜನ ಅವರ ಶಿಷ್ಯರಾಗಿಬಿಟ್ಟರು. ಅವರನ್ನು ಎಲ್ಲ ಅರ್ಥಗಳಲ್ಲೂ, ಎಲ್ಲ ಸ್ತರಗಳಲ್ಲೂ ಆರಾಧಿಸತೊಡಗಿದರು. ನಾಲ್ಕೇ ನಾಲ್ಕು ಮಾತುಗಳಿಂದ ಅವರು ದಶದಿಕ್ಕುಗಳಲ್ಲೂ ಮನೆಮಾತಾಗಿ ಹೋದರು.

**'ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ ನಿಬೋಧತ'** ಎಂಬ ಉಪನಿಷದ್ವಾಣಿ ಇವರ ಸಿಂಹಸದೃಶ ದೈವೀಕಂಠದಲ್ಲಿ ಹೊಸ ಕಾಂತಿಯನ್ನು, ಹೊಸ ಸಂದೇಶವನ್ನು ಪಡೆಯಿತು.

ಅನಂತರ ವಿವೇಕಾನಂದರು ಭಾರತಕ್ಕೆ ಬಂದರು. ತನ್ನ ತಾಯ್ನಾಡಿನ ದುಃಸ್ಥಿತಿಯನ್ನು, ತನ್ನ ಸೋದರ ಸೋದರಿಯರ ಬಡತನ ಅಜ್ಞಾನಗಳನ್ನು ಕಂಡು ಕಂಬನಿದುಂಬಿದರು. ತಾಯಿ ಭಾರತಿಯ ದುಃಖಾಶ್ರುಗಳನ್ನು ತಡೆಯಲು ಬದ್ಧಕಂಕಣರಾದರು. ಗುರುಭಾಯಿಗಳೆಲ್ಲರನ್ನೂ ಒಂದುಗೂಡಿಸಿ ಶ್ರೀರಾಮಕೃಷ್ಣ ಮಿಷನ್ನನ್ನು ಪ್ರಾರಂಭಿಸಿದರು. ಸಮಾಜೋದ್ಧಾರವನ್ನು ಎಲ್ಲರಿಗೂ ಜೀವನಮಂತ್ರವನ್ನಾಗಿ ಬೋಧಿಸಿದರು. ಅದುವರೆಗೂ ಭಾರತೀಯ ಸಂನ್ಯಾಸಿಗಳು ವಾಕ್ಯಾರ್ಥಗಳನ್ನು ಮಾಡುತ್ತಿದ್ದಿರಬಹುದು; ವೇದವೇದಾಂಗಗಳಿಗೆ ಭಾಷ್ಯಗಳನ್ನು ಬರೆದಿರಬಹುದು; ವ್ಯಾಖ್ಯಾನ ಪ್ರವಚನಗಳನ್ನು ನೀಡಿದ್ದಿರಬಹುದು; ಪಾಂಡಿತ್ಯದ ಕಸರತ್ತುಗಳನ್ನು ಮಾಡಿದ್ದಿರಬಹುದು; ಅಥವಾ ಇದಾವುದನ್ನು ಮಾಡದೆಯೂ ಇದ್ದಿರಬಹುದು! ಆದರೆ, ವಿವೇಕಾನಂದರ ನೇತೃತ್ವದಲ್ಲಿ, ಪ್ರಾಯಶಃ ಮೊದಲ ಬಾರಿಗೆ ಸಂನ್ಯಾಸಿಗಳು ಸಮಾಜದ ಋಣ ತೀರಿಸಬೇಕಾದುದನ್ನು ತಮ್ಮ ಆದ್ಯತೆಯ ವಿಷಯವಾಗಿ ಆಯ್ದುಕೊಂಡರು. **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬುದು ಈ ನೂತನ ಕಾಲದ ಹೊಸ ಗಾಯಿತ್ರಿಯಾಯಿತು. ಮುಮುಕ್ಷುವಾದವನಿಗೆ ಮೋಕ್ಷ ಪ್ರಾಪ್ತಿ ವೈಯಕ್ತಿಕ ನೆಲೆಯಲ್ಲಿ ಎಷ್ಟು ಮುಖ್ಯವೋ, ಸಾಮುದಾಯಿಕ ನೆಲೆಯಲ್ಲಿ 'ಜಗದ್ಧಿತ'ವೂ ಅಷ್ಟೇ ಮುಖ್ಯ ಎಂಬ ಆಲೋಚನೆ ತುಂಬ ಪ್ರೌಢವೂ, ಗಮನಾರ್ಹವೂ ಆದುದು. "ಗುರುವಾದರೂ ಕಾಯಕಕ್ಕೆ ಒಳಗು" ಎಂಬ ಶರಣರ ಮಾತು ಮತ್ತೆ ಏಳು ಶತಮಾನಗಳ ಬಳಿಕ ಅನುರಣನಗೊಂಡಿತೇನೋ ಎಂಬ ಭಾವ ನಮ್ಮನ್ನಾವರಿಸುತ್ತಿದೆ.

ಹೀಗೆ ರಾಮಕೃಷ್ಣ ಮಿಷನ್ ತನ್ನ ಸೇವಾಕಾರ್ಯಗಳನ್ನು ಪ್ರಾರಂಭಿಸಿದುದು, ವಿಸ್ತರಿಸಿದುದು ಈಗ ಒಂದು ಇತಿಹಾಸವೇ ಆಗಿದೆ. ಗುಡ್ಡಗಾಡು ಪ್ರದೇಶಗಳು, ಹಿಂದುಳಿದ ಪ್ರದೇಶಗಳೆಲ್ಲವನ್ನೂ ತನ್ನ ಮಾತೃಸದೃಶ ತೆಕ್ಕೆಗೆ ತೆಗೆದುಕೊಂಡ ಈ ಸಂಸ್ಥೆ, ಶಿಕ್ಷಣ, ಜನಾರೋಗ್ಯ, ಆಧ್ಯಾತ್ಮಿಕ ಆಂದೋಲನಗಳಲ್ಲಿ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಈ ಧರ್ಮಕಾರ್ಯ ಎನ್ನುವುದು ವಾಸ್ತವವಾಗಿ ಮಾನವ ಧರ್ಮದ ವಿಶಾಲ ತಳಹದಿಯ ಮೇಲೆ ನಿಂತಿದೆ. 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಭಾವದಿಂದ ಎಲ್ಲ ಜನರೂ ದೇವರ ಮಕ್ಕಳು ಎಂಬ ವಿನೀತ ಆರ್ದ್ರಭಾವದಿಂದ ಈ ಸಂಸ್ಥೆಯು ಸೇವಾಕಾರ್ಯಗಳಲ್ಲಿ ತೊಡಗಿದೆ. ಯಾವುದೇ ಧರ್ಮದ ಜೊತೆ ತನ್ನನ್ನು ಸಮೀಕರಿಸದೆ, ಸನಾತನ ಮೌಲ್ಯಗಳ ವಿಶ್ವಸತ್ಯಗಳ ಬುನಾದಿಯ ಮೇಲೆ ತನ್ನ ಸೇವಾಸೌಧವನ್ನು ನಿರ್ಮಿಸಿದೆ. ಮತಾಂತರವನ್ನು ಈ ಸಂಸ್ಥೆ ಒಪ್ಪುವುದಿಲ್ಲ. – ಏಕೆಂದರೆ ಎಲ್ಲ ಧರ್ಮಗಳೂ ಒಬ್ಬನೇ ದೇವನನ್ನು ತಲುಪುವ ಮಾರ್ಗಗಳು ಎಂದಮೇಲೆ, ಮಾರ್ಗವನ್ನು ಬದಲಾಯಿಸುವ, ಬದಲಾಯಿಸಲು ಪುಸಲಾಯಿಸುವ, ಅದಕ್ಕಾಗಿ ಕಪಟ, ವಂಚನೆಗಳ ಆಟಾಟೋಪವಾದರೂ ಏಕೆ ?



ಸ್ವಾಮಿ ವಿವೇಕಾನಂದರು ತಮ್ಮ ಜೀವಮಾನದುದ್ದಕ್ಕೂ ಅಧ್ಯಯನ, ಅಧ್ಯಾಪನಗಳಲ್ಲಿ ಪ್ರಖರವಾಗಿ ತೊಡಗಿಸಿಕೊಂಡವರು. ಹಿಂದೂ ಧರ್ಮದ ಬಗ್ಗೆ, ಅದರ ವೇದಾಂತ ತತ್ತ್ವಗಳ ವಿಶ್ವತೋವಿಶಾಲವಾದ ದರ್ಶನಗಳ ಮೇಲೆ ವಿವೇಕಾನಂದರಿಗೆ ಅಪಾರವಾಗಿ ಪ್ರೀತಿ, ಅಭಿಮಾನಗಳಿದ್ದವು. ಆದರೆ ಇಲ್ಲಿ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆ, ಡಂಭಾಚಾರ, ದ್ವಂದ್ವಗಳನ್ನು ಖಂಡಿಸಲು ಅವರು ಹಿಂದೆಗೆಯಲಿಲ್ಲ. ಕುಶಲಿಯಾದ ವೈದ್ಯನೊಬ್ಬನು ರೋಗಿಯ ಪರಿಸ್ಥಿತಿಯನ್ನು ಪರಿಶೀಲಿಸಿ ತಾಳಬೇಕಾದ ಖಚಿತ ನಿಲುವಿನಂತೆ ಅವರ ಬರವಣಿಗೆ. ಜನರೆಲ್ಲರೂ ವಿಚಾರವಂತರಾಗಿ, ವಿವೇಕಶೀಲರಾಗಿ ಬೆಳೆಯಬೇಕೆಂಬ ನಿಲುವು ಅವರದು. ಹಾಗೆಂದೇ, 'ವಿವೇಕಾನಂದ ಕೃತಿಶ್ರೇಣಿ' ಯ ಸಂಪುಟಗಳು ಖಚಿತ ವಿಚಾರಧಾರೆಗೆ, ನಿರ್ದಿಷ್ಟತೆಗೆ, ನಿರ್ದುಷ್ಟತೆಗೆ ಹಿಡಿದ ಕನ್ನಡಿ. ಎಲ್ಲ ಭಾರತೀಯರೂ ಅವರಲ್ಲಿ ತಮ್ಮ ಮುಖವನ್ನು ನೋಡಿಕೊಂಡು, ಅಗತ್ಯವಿದ್ದಷ್ಟನ್ನು ತಿದ್ದಿ ತೀಡಿ ತಮ್ಮನ್ನು ಸರಿಪಡಿಸಿಕೊಳ್ಳಬೇಕು. ಆಗ ಮಾತ್ರ ದೇಶಕ್ಕೆ ಹೊಸ ಬೆಳಕು !

ಇಂದಿನ ದಿನಮಾನಗಳಿಗೆ ಅತ್ಯಂತ ಸೂಕ್ತವಾಗಿ ಹೊಂದುವಂಥ, ವಿವೇಕಾನಂದರ ಕೆಳಕಂಡ ಮಾತುಗಳನ್ನು ನಾವು ಸದಾ ನೆನಪಿನಲ್ಲಿಡಬೇಕು.

“ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದು ಈಗ ಇರುವುದಕ್ಕಿಂತ ಅಧಃಪತನಗೊಳ್ಳುವುದನ್ನು, ದುರ್ಬಲವಾಗುವುದನ್ನು ನಾನು ಸಹಿಸಲಾರೆ. ಆದ್ದರಿಂದ ಭಾರತೀಯರ ಸಲುವಾಗಿ ಮತ್ತು ಸತ್ಯದ ಸಲುವಾಗಿ ನಾನು 'ಎದ್ದೇಳಿ' ಎಂದು ಕೂಗಿ ಹೇಳಬೇಕಾಗಿದೆ. ಆ ಮೂಲಕ ನನ್ನ ಜನರ ಅಧಃಪತನದ ವಿರುದ್ಧ ದನಿ ಎತ್ತಬೇಕಾಗಿದೆ. ಉಪನಿಷತ್ತಿನ ಸತ್ಯಗಳು ನಿಮ್ಮ ಮುಂದಿವೆ. ಅವುಗಳನ್ನು ಸ್ವೀಕರಿಸಿ ಅವುಗಳನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿರಿ. ಆಗ ಭಾರತದ ಸರ್ವೋದ್ಧಾರವು ಸಾಧ್ಯವಾಗುತ್ತದೆ.”

ಇನ್ನಾದರೂ ನಾವು ಕಣ್ಣುಬಿಟ್ಟು ಕ್ರಿಯಾಶೀಲರಾಗೋಣವೆ!

**– ಆರ್.ಎಸ್. ಪೂರ್ಣಾನಂದ,**
**ಮೈಸೂರು**

---

**ನಾ**ನು ಸ್ವಾಮಿ ವಿವೇಕಾನಂದರನ್ನು ಇಷ್ಟಪಡಲು ಕಾರಣ, ಅವರು ಎಲ್ಲ ಕಾಲಕ್ಕೆ ಸಲ್ಲುವ ಉಪದೇಶವನ್ನು ನೀಡಿದರು, ಆ ಉಪದೇಶವನ್ನು ತಾವೇ ಬದುಕಿದರು ಎನ್ನುವುದಕ್ಕೆ. ತಂತ್ರಜ್ಞಾನದ ಮುನ್ನಡೆ, ಕೈಗಾರಿಕೀಕರಣ, ನಗರೀಕರಣ – ಇವುಗಳಿಂದ ಬದುಕು ಗುರುತಿಸಲಾಗದಷ್ಟು ಬದಲಾಗಿದೆ. ಸಾವಿರಾರು ಜನರ ಮಧ್ಯೆ ಇದ್ದು ವ್ಯಕ್ತಿಯು ತನ್ನೊಳಗೆ ಒಂಟಿತನವನ್ನು ಅನುಭವಿಸುವಂತಾಗಿದೆ.

ವಿವೇಕಾನಂದರು ಮನುಷ್ಯನು ಹೊರಗಿನ ನೆರವನ್ನು ಅವಲಂಬಿಸುವುದಕ್ಕಿಂತ ನಿರ್ಭಯತೆಯನ್ನೂ, ಮಾನಸಿಕ ಏಕಾಗ್ರತೆಯನ್ನೂ ಬೆಳೆಸಿಕೊಳ್ಳಬೇಕೆಂದು ಸಾರಿಸಾರಿ ಹೇಳಿದರು. ಉಪನಿಷತ್ತು ಕಲಿಸುವುದು ನಿರ್ಭಯತೆಯನ್ನೇ ಎಂದು ವಿವರಿಸಿದರು. (ಅಮೆರಿಕಕ್ಕೆ ಮೊದಲ ಬಾರಿ ಹೋದಾಗ ಅವರು ಎದುರಿಸಿದ್ದು ಇಂಥದೇ ಏಕಾಂಗಿತನವನ್ನು.)

ಇಂದಿನ ಜಗತ್ತಿನಲ್ಲಿ ಮನುಷ್ಯನನ್ನು ಕಾಡುವ ಒಂದು ಸ್ಥಿತಿಯನ್ನು ಪ್ರಸ್ತಾಪಿಸಿದ್ದೇನೆ. ಇದು ಏಕಾಕಿತನ, ತಬ್ಬಲಿತನ, ತನ್ನ ಬದುಕಿಗೆ ಅರ್ಥವೇ ಇಲ್ಲ ಎಂಬ ಭಾವನೆ. ಪಾಶ್ಚಾತ್ಯ ಜಗತ್ತಿನಲ್ಲಿ ಫ್ರಾನ್ಜ್ ಕಾಫ್ಕನಿಂದ ಪ್ರಾರಂಭವಾದ ಆಧುನಿಕ ಸಾಹಿತ್ಯದ ಕೇಂದ್ರವಿರುವುದು ಅನಾಥಪ್ರಜ್ಞೆ – ಮನುಷ್ಯನ ಶಕ್ತಿಯನ್ನೆಲ್ಲ ಹೀರಿ ಬಿಡುವ ಅನಾಥಪ್ರಜ್ಞೆ, ನಮ್ಮ ಬದುಕು ಪಾಶ್ಚಾತ್ಯೀಕರಣವಾದಂತೆ ಅನಾಥಪ್ರಜ್ಞೆಯು ನಮ್ಮನ್ನು ಆವರಿಸತೊಡಗಿದೆ. ಬದುಕಿಗೆ ಗುರಿ, ಅರ್ಥ ಉಂಟೇ ಎಂದು ದಿಗ್ಭ್ರಮೆಯಾಗುತ್ತದೆ. ವಿವೇಕಾನಂದರು ವ್ಯಕ್ತಿಯ ಬದುಕಿಗೆ ಸಹಮಾನವರ ಬದುಕಿನೊಡನೆ ಅರ್ಥವತ್ತಾದ ಸಂಬಂಧ ಕಲ್ಪಿಸಿದರು. ಇದರ ಆಧಾರ ಪಡೆದುಕೊಳ್ಳುವುದಲ್ಲ, ಕೊಡುವುದು, ಅರ್ಪಣೆ; ಆದುದರಿಂದ ಈ ಸಂಬಂಧದ ಸಾರ್ಥಕ್ಯಕ್ಕೆ ಬೇರೆ ಯಾರನ್ನೂ ಅವಲಂಬಿಸಬೇಕಾಗಿಲ್ಲ. ಸೇವೆ – ಇತರರ ಸೇವೆ, ದಲಿತರ, ಪಾಪಿಗಳೆನ್ನಿಸಿಕೊಂಡವರ ಸೇವೆ, ಇವರೇ ದೇವರು ( My God, the wicked, my God the miserable, my God the poor of all races.).

ವಿವೇಕಾನಂದರು ನನಗೆ ಮೆಚ್ಚಿಗೆಯಾಗುವುದಕ್ಕೆ ಮತ್ತೊಂದು ಕಾರಣವೆಂದರೆ ಅವರು ಇಹ ಜಗತ್ತಿನ ಬದುಕನ್ನೂ, ಪಾರಮಾರ್ಥಿಕವನ್ನೂ ಸಂಪೂರ್ಣವಾಗಿ ಬೇರ್ಪಡಿಸಲಿಲ್ಲ. ಅವೆರಡರಲ್ಲಿ ಒಂದು ಅರ್ಥವತ್ತಾದ ಸಂಬಂಧವನ್ನು ಕಲ್ಪಿಸಿದರು. "ಮನುಷ್ಯನು ನಿಲ್ಲಬೇಕಾದುದು ಅವನ ಆತ್ಮನ ವೈಭವದ ಮೇಲೆ – ಅನಂತವಾದ, ಅಮರವಾದ ಸಾವಿಲ್ಲದ ಆತ್ಮ – ಶಸ್ತ್ರವು ಭೇದಿಸಲಾರದ, ಅಗ್ನಿ ಸುಡಲಾರದ, ನೀರು ಕರಗಿಸಲಾರದ, ಆದಿ ಅಂತ್ಯವಿಲ್ಲದ ಆತ್ಮ" ಎಂದರು. ಕ್ಷಣಕ್ಷಣಕ್ಕೆ ಬದಲಾಗುವ, ಬಣ್ಣಬಣ್ಣದ ನೀರು ಗುಳ್ಳೆಯಂತೆ ಆಕರ್ಷಕವಾದ, ಆದರೆ ಅನಿತ್ಯವಾದ ಜಗತ್ತಿನ ಹಿಂದಿರುವ ಸತ್ಯವನ್ನು ಗುರುತಿಸಿದರು. ಅದಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ತಮ್ಮನ್ನು ಅರ್ಪಿಸಿಕೊಳ್ಳುವಂತೆ ಇತರರಿಗೂ ಮಾರ್ಗದರ್ಶನ ಮಾಡಿದರು. ಆದರೆ ಬಡತನ, ಅಜ್ಞಾನ, ದುಃಖಕ್ಕೆ ಸಿಕ್ಕ ಸಹಾಯಹೀನರ ದೆಸೆಗೆ ಅವರ ಹೃದಯ ಸ್ಪಂದಿಸಿತು. ಅವರ ಸೇವೆಗಾಗಿಯೇ ರಾಮಕೃಷ್ಣರ ಅನುಯಾಯಿಗಳ ಮತ್ತು ಶಿಷ್ಯರ ತಂಡವನ್ನು ಕಟ್ಟಿದರು. ಅವರ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡರು. ಐಹಿಕ ಜೀವನ ಅವಾಸ್ತವ ಎಂದು ಗುರುತಿಸಿದರು, ಆದರೆ ಅದನ್ನು ತಿರಸ್ಕರಿಸಲಿಲ್ಲ. ಸೇವಾಕ್ಷೇತ್ರವಾಗಿ ಅದು ವಾಸ್ತವ, ತನ್ನ ಸುಖಭೋಗಗಳ ಮಟ್ಟಿಗೆ ಅವಾಸ್ತವ ಎಂದು ಉಪದೇಶಿಸಿದರು. ಹೀಗೆ ಮನುಷ್ಯನ ಒಳಗಣ್ಣನ್ನು ತೆರೆಸಿದರು. ನಿತ್ಯ-ಅನಿತ್ಯಗಳ ಸಾಮರಸ್ಯವನ್ನು ಸಾಧಿಸಿದರು.

ವಿವೇಕಾನಂದರ ಒಂದು ಪ್ರಶ್ನೆ, ಒಂದು ಉತ್ತರ – ಇವು ನನ್ನ ಮನಸ್ಸಿನಲ್ಲಿ ಮನೆಮಾಡಿದೆ. ಅವರು ಕೇಳಿದ ಪ್ರಶ್ನೆ : "ಯಾವುದೋ ಕಾರಣಗಳಿಗಾಗಿ ಹಲವು ರಾತ್ರಿ ನಿದ್ರೆಗೆಡುತ್ತೀರಿ. ದೇಶದ ಸ್ಥಿತಿಯನ್ನು ಸ್ಮರಿಸಿಕೊಂಡು ಒಂದು ರಾತ್ರಿಯಾದರೂ ನಿದ್ರೆ ಕೆಟ್ಟಿದ್ದೀರಾ?" ನಾನು ಪ್ರಸ್ತಾಪಿಸುವ ಉತ್ತರಕ್ಕೆ ಒಂದು ಹಿನ್ನೆಲೆ ಇದೆ. ರಾಮಕೃಷ್ಣರ ಶಿಷ್ಯರು ಕೊಲ್ಕತಾದಲ್ಲಿ ಬಹಳ ದುಸ್ಥಿತಿಯಲ್ಲಿದ್ದ ಜೋಪಡಿಯಲ್ಲಿ ವಾಸಿಸುತ್ತಿದ್ದರು. ಅವರಿಗಾಗಿ ಒಂದು ಸಣ್ಣ ಆಶ್ರಯತಾಣವನ್ನು ನಿರ್ಮಿಸಲು ಬಹಳ ಪ್ರಯತ್ನಪಟ್ಟು ಹಣ ಸಂಗ್ರಹಿಸಿ, ಒಂದು ನಿವೇಶನವನ್ನು ಕೊಂಡರು. ಆ ಸಂದರ್ಭದಲ್ಲಿಯೇ ಕೊಲ್ಕತಾದಲ್ಲಿ ಭಯಂಕರ ಪ್ಲೇಗ್ ಬಂದಿತು. ಗಂಜಿಕೇಂದ್ರಗಳನ್ನು ತೆರೆಯಬೇಕಾಯಿತು. ವಿವೇಕಾನಂದರು, ಅವರ ಸಂಗಾತಿಗಳು ಕೆಲವು ಕೇಂದ್ರಗಳನ್ನು ತೆರೆದರು. ಕೆಲವು ದಿನಗಳ ನಂತರ ವಿವೇಕಾನಂದರಿಗೆ ಇನ್ನೂ ಕೆಲವು ಕೇಂದ್ರಗಳನ್ನು ತೆರೆಯುವುದು ಅಗತ್ಯ ಎನ್ನಿಸಿತು. ಅವರು ಆ ಮಾತು ಹೇಳಿದಾಗ ಅವರ ಸಂಗಾತಿಗಳು, "ಹಣ ಎಲ್ಲಿದೆ?" ಎಂದರು. ಅದಕ್ಕೆ ವಿವೇಕಾನಂದರ ಉತ್ತರ ಇದು: "ನಮ್ಮ ನಿವೇಶನವನ್ನು ಮಾರಿದರಾಯಿತು."

– ಪ್ರೊ. ಎಲ್. ಎಸ್. ಶೇಷಗಿರಿರಾವ್, ಬೆಂಗಳೂರು

---

**ಸ್ವಾ**ಮೀಜಿಯವರ ಜೀವನಚರಿತ್ರೆಯಿಂದ ಪ್ರಭಾವಿತರಾದವರು ಸಹಸ್ರಾರು ಮಂದಿ. ಅವರಲ್ಲಿ ನಾನೂ ಒಬ್ಬ. ಅವರನ್ನು ಮೆಚ್ಚಲು ನನಗೆ ಬಹಳ ಕಾರಣಗಳಿವೆ. ಮನಸ್ಸಿನ ಹಿನ್ನೋಟದಲ್ಲಿ ಹುದುಗಿಕೊಂಡಿರುವ ಅನೇಕ ಚಿಂತನೆಗಳು, ಘಟನೆಗಳು ಜೀವನದ ಸಂಧ್ಯಾಕಾಲದಲ್ಲಿ ಆಗಾಗ್ಗೆ ಬರುವುದು ಸಹಜ. ನಾನು ಬೆಳೆದ ಕೌಟುಂಬಿಕ ಮತ್ತು ಸಾಮಾಜಿಕ ಆವರಣದಲ್ಲಿ ಕಂಡುಬಂದ ಕಂದಾಚಾರಗಳು, ಸಂಕುಚಿತಭಾವನೆಗಳು, ಅನುಚಿತ ಮಡಿವಂತಿಕೆ, ಸಂಪ್ರದಾಯ ಪಾಲನೆಯೇ ಧರ್ಮವೆಂಬ ಅಂಧಶ್ರದ್ಧೆಯ ಪಂಜರದಲ್ಲಿ ಕಳೆದ ಬಾಲ್ಯ; ಇದಲ್ಲದೆ ಪರಕೀಯರ ಆಳ್ವಿಕೆಯಿಂದ ಉಂಟಾದ ಕಡು ಬಡತನ ಮತ್ತು ದೇಶದ ಅಸಹಾಯಕತೆ – ಇವೇ ವಿದ್ಯಾರ್ಥಿ ದೆಸೆಯಲ್ಲೂ, ಯೌವನದಲ್ಲೂ ಎಲ್ಲರಂತೆ ನನ್ನನ್ನೂ ಕಾಡಿಸಿತು. ರಾಜಕೀಯ ರಂಗದಲ್ಲಿ ಗಾಂಧಿ, ನೆಹರು, ಪಟೇಲ್ ಮೊದಲಾದ ಪ್ರಸಿದ್ಧ ಹೋರಾಟಗಾರರ ಪ್ರಭಾವ, ಮಾರ್ಕ್ಸ್, ಲೆನಿನ್ ಇವರ ಬುಡಮೇಲು ಮಾಡುವ ಕ್ರಾಂತಿವಾದ, ಯುದ್ಧದ ಕಾರ್ಮೋಡಗಳು, ಅನಂತರ ಸಂಭವಿಸಿದ ಆ ವರ್ಷದ ಕರಾಳ ವಿಶ್ವಯುದ್ಧ, ಇದರಿಂದ ಉಂಟಾದ ಆರ್ಥಿಕ ಮುಗ್ಗಟ್ಟು ಮತ್ತು ನಿರುದ್ಯೋಗದ ನಿತ್ಯಭೀತಿ – ಇವೇ ಮೊದಲಾದ ದೇಶಾದ್ಯಂತ ಆವರಿಸಿದ ಶಂಕೆಯಲ್ಲಿ ಮಿಂದವರಲ್ಲಿ ನಾನೂ ಒಬ್ಬ. ಏಳೆಂಟು ದಶಕಗಳ ಹಿಂದೆ ಇದ್ದ ಸತ್ಯ ಸನ್ನಿವೇಶವೇ ಇದು. ಸ್ವಾಮೀಜಿಯವರಿಂದ ಪ್ರಭಾವಿತನಾಗುವುದಕ್ಕೆ ಮುಂಚೆ ನನಗಿದ್ದ ಮಾನಸಿಕ ಗೊಂದಲ ಇದು. ಈ ಹಿನ್ನೆಲೆಯಲ್ಲಿ ಉಂಟಾದ ವೈಯಕ್ತಿಕ ಅನುಭವದಲ್ಲಿ ಒಂದೆರಡು ಸಣ್ಣ ಘಟನೆಗಳು ಸ್ವಾಮೀಜಿಯ ಬಗ್ಗೆ ಕುತೂಹಲಕ್ಕೆ ಕಾರಣವಾದವು. ೧೯೩೨ನೆಯ ಇಸವಿ. ಆಗ ತಾನೇ ಹೈಸ್ಕೂಲ್ ಸೇರಿದ ವಿದ್ಯಾರ್ಥಿ ನಾನು. ಆಗ ಕಾಲೇಜಿನಲ್ಲಿ ಓದುತ್ತಿದ್ದ ಇಬ್ಬರು ಹಿರಿಯ ವಿದ್ಯಾರ್ಥಿಗಳೊಡನೆ ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಿದೆ. ಆಗ ಅಲ್ಲಿದ್ದ ಸ್ವಾಮೀಜಿ ಯಾರು ಎಂಬುದು ನೆನಪಿಲ್ಲ. ಆದರೆ ಕುವೆಂಪುರವರು ಅಲ್ಲಿದ್ದರು. ಅವರನ್ನು ನೋಡಿದ ಸವಿನೆನಪು. ಸ್ವಲ್ಪಕಾಲ ಇವರೊಂದಿಗೆ ನನ್ನ ಹಿರಿಯರು ಮಾಡಿದ ಸಂಭಾಷಣೆ ಯನ್ನು ಕೇಳಿ, ಸ್ವಾಮಿ ವಿವೇಕಾನಂದರ ಐತಿಹಾಸಿಕ ಕೊಡುಗೆಯ ಬಗ್ಗೆ ಕುತೂಹಲ ಹುಟ್ಟಿದ್ದು ನನ್ನ ಮುಂದಿನ ಅಧ್ಯಯನಕ್ಕೆ ನಾಂದಿಯಾಯಿತು. ಇದನ್ನು ನಿವೇದಿಸಿಕೊಳ್ಳುವ ಪ್ರಸಂಗವು ಈಗ ಒದಗಿರುವುದು ಒಂದು ಸಮಾಧಾನ.

ರಾಮಕೃಷ್ಣ ಪರಮಹಂಸರನ್ನು ಸಂಧಿಸುವ ಮುನ್ನ ಇಂಗ್ಲಿಷ್ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಪಡೆದಿದ್ದ ಹಿನ್ನೆಲೆಯಲ್ಲಿ ಸ್ವಾಮೀಜಿಯವರಿಗೆ ಬಹುವಿಧವಾದ ಶಂಕೆಯುಂಟಾಗಿದ್ದುದು ಎಲ್ಲರಿಗೂ ತಿಳಿದ ವಿಷಯ. ಯಾಂತ್ರಿಕತೆಯಿಂದ ಪಾಶ್ಚಿಮಾತ್ಯರಿಗೆ ಲಭಿಸಿರುವ ಅನುಪಮಶಕ್ತಿ, ಅದರಿಂದ ನಮ್ಮ ದೇಶಕ್ಕೆ ಲಭಿಸಿದ ಗುಲಾಮಗಿರಿ, ಸಾರ್ವತ್ರಿಕ ಬಡತನ ಮತ್ತು ಅನಕ್ಷರತೆ – ಅದರಲ್ಲೂ ನಮ್ಮ ದೇಶದ ಹೆಂಗಸರಿಗೆ ಲಭ್ಯವಾಗದ ವಿದ್ಯಾವಕಾಶ – ಇವೆಲ್ಲವೂ ಅವರ ಮನಸ್ಸನ್ನು ತಳಮಳಗೊಳಿಸಿತು. ದೇವರಿದ್ದಾನೆಯೆ, ಇಲ್ಲವೆ ಎಂಬ ನಾಸ್ತಿಕತೆಯೂ ಬಾಧಿಸಿತ್ತು. ಪರಮಹಂಸರ ಸಂಪರ್ಕದಿಂದ ಈ ಸಂದೇಹವು ನಿವಾರಣೆಯಾಗಿ ನಮ್ಮ ಸಂಸ್ಕೃತಿಯ ಹಿರಿಮೆಯ ಅರಿವು ಉಂಟಾಗಿ, ರಾಷ್ಟ್ರೋನ್ನತಿಗೆ ಶ್ರಮಿಸಬೇಕೆಂಬ ದೃಢಸಂಕಲ್ಪ ಅವರಲ್ಲಿ ಬೇರೂರಿತು. ಅವರು ಚಿಕಾಗೋವಿನ ವಿಶ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಐತಿಹಾಸಿಕ ಭಾಷಣದಿಂದ ಅಲ್ಲಿನ ಶ್ರೋತೃಗಳಲ್ಲಿ ಅಲ್ಲದೇ, ನಮ್ಮ ದೇಶದ ಮೂಲೆ ಮೂಲೆಯಲ್ಲಿಯೂ ಅದರ ಪ್ರಭಾವ ಹರಡಿ ಅನೇಕ ಯುವಕರ ಮನಸ್ಸನ್ನು ಸೆಳೆಯಿತು. ಪದೇ ಪದೇ ಅವರು ತಮ್ಮ ಭಾಷಣಗಳಲ್ಲೂ ಬರವಣಿಗೆಗಳಲ್ಲೂ ಒತ್ತಿ ಹೇಳಿದ ಅಂಶ, "ಏಳಿ. ಎದ್ದೇಳಿ. ಗುರಿ ಮುಟ್ಟುವವರೆಗೂ ನಿಲ್ಲಬೇಡಿ" ಎನ್ನುವುದು. ಈ ಸ್ಫೂರ್ತಿಯುತ ನುಡಿಯು ನನ್ನ ಮನಸ್ಸನ್ನು ಬಹುಮಟ್ಟಿಗೆ ಪ್ರಭಾವಗೊಳಿಸಿದ್ದು ನನಗಾದ ವೈಯಕ್ತಿಕ ಅನುಭವ.

ಆಧ್ಯಾತ್ಮಿಕತೆ ಎಂದರೇನು ? ಇದಕ್ಕೂ ಯಾಂತ್ರಿಕತೆಗೂ ಸ್ವಭಾವದಲ್ಲಿ ವಿರೋಧವಿರುವುದೇ ಎಂಬ ವಿಷಯವನ್ನು ನನ್ನದೇ ಅದ ರೀತಿಯಲ್ಲಿ ಆಗಾಗ್ಗೆ ವಿಮರ್ಶೆ ಮಾಡಿದ್ದೇನೆ. ನನ್ನ ಜಿಜ್ಞಾಸೆಯನ್ನು ಕೆಲವು ಸಲ ನನಗೆ ಹಿರಿಯರಾದ ಕೆಲವರೊಂದಿಗೆ ಹಂಚಿಕೊಂಡಿದ್ದೂ ಉಂಟು. ಯಾಂತ್ರಿಕತೆಯೆಂಬುದು ಆಂಗ್ಲ ಭಾಷೆಗೆ ತರ್ಜುಮೆ ಮಾಡಿದರೆ 'techonology' ಎಂದು ಆಗುತ್ತದೆ. ಇದರ ಉಗಮವೇ ವೈಜ್ಞಾನಿಕತೆ. ಇದಕ್ಕೆ "Scientific Temper" ಎಂಬುದು ಆಂಗ್ಲಭಾಷೆಯ ಅನುವಾದ. ನಿಸರ್ಗಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಿಷಯವನ್ನೂ ಕೂಲಂಕಷವಾಗಿ ಶೋಧಿಸಿ ಪ್ರಮಾಣಬದ್ಧವಾಗಿರುವ ಜ್ಞಾನವನ್ನು ಸಾಧನೆಗಳನ್ನಾಗಿ (tools) ಪರಿಕಲ್ಪಿಸಿ ನಮ್ಮ ಜೀವನ ಶೈಲಿಗೆ ಅಳವಡಿಸಿಕೊಂಡಿರುತ್ತೇವೆ. ಇದೇ ಯಾಂತ್ರಿಕತೆಯ ಸ್ವರೂಪ. ಈ ನಮ್ಮ ಯಾಂತ್ರಿಕ ಯುಗದಲ್ಲಿ ಆಧ್ಯಾತ್ಮಿಕತೆಗೆ ಇರುವ ಸ್ಥಾನದ ವೈಶಿಷ್ಟ್ಯವೇನು ಎಂಬುದನ್ನು ನನ್ನ ಮಟ್ಟಿಗೆ ತರ್ಕಿಸಿರುವ ಅನುಭವವು ಬಹುಮಟ್ಟಿಗೆ ವೈಯಕ್ತಿಕವಾದರೂ, ಸ್ವಾಮೀಜಿಯ ಪ್ರಭಾವವಿಲ್ಲದೇ ಆಗುತ್ತಿರಲಿಲ್ಲ. ಅವರ ಅಪಾರ ಪಾಂಡಿತ್ಯಕ್ಕೂ, ಮನೋವೈಶಾಲ್ಯಕ್ಕೂ, ಆದರ್ಶ ಜೀವನಕ್ಕೂ ಮನಸೋತಿದ್ದೇನೆ. ಇದು ನನ್ನ ಸಮಯೋಚಿತ ಭಾವನೆಯಲ್ಲ. ನನ್ನ ಸಾಧಾರಣ ಜೀವನದಲ್ಲಿ ಅನುಭವಕ್ಕೆ ಬಂದಿರುವ ತೃಪ್ತಿಧಾರೆ. ಆಧ್ಯಾತ್ಮಿಕತೆಗೂ ಯಾಂತ್ರಿಕತೆಗೂ ವೈಷಮ್ಯವೂ ಇಲ್ಲ; ಇರಕೂಡದು ಎಂದು ಸ್ವಾಮೀಜಿ ಅನೇಕ ಸಲ ಹೇಳಿದ್ದಾರೆ. ಅದು ನಮ್ಮ ಭವ್ಯ ಭವಿಷ್ಯಕ್ಕೆ ಅನುವುಮಾಡಿಕೊಡಬೇಕು, ಅಷ್ಟೆ. ಲೌಕಿಕ ಪ್ರವೃತ್ತಿಯೂ, ಅಲೌಕಿಕ ಪ್ರಜ್ಞೆಯೂ ಈ ದೇಹದಲ್ಲೇ ಆಶ್ರಯಗೊಂಡಿದೆ ಎಂಬುದು ನಿರ್ವಿವಾದ. ಇದನ್ನು ಗ್ರಹಿಸುವ ಶಕ್ತಿ ಧಾರ್ಮಿಕವೂ ಅಹುದು, ದೈವಿಕವೂ ಅಹುದು. ಪ್ರಾಣಿ ಜೀವಿಗಳಲ್ಲಿ ಇದು ಮಾನವನಿಗೆ ಮಾತ್ರ ಉಪಲಬ್ಧವಾಗಿರುವ ಮೂಲಧನ. ತಾತ್ತ್ವಿಕವಾಗಿ ನೋಡಿದರೆ ಕೇವಲ ಯಾಂತ್ರಿಕತೆಯಿಂದ ನಮಗೆ ಲಭ್ಯವಾಗುವುದು ನಾಸ್ತಿಕತೆ ಮತ್ತು ಮಾನವೀಯತೆಯ ಬಗ್ಗೆ ಉಂಟಾಗುವ ಅಕ್ಷಮ್ಯ ಅಸಡ್ಡೆ. ನಮ್ಮ ದೈಹಿಕ ಸುಖಕ್ಕಾಗಿ ಸೃಷ್ಟಿಸಿಕೊಂಡಿರುವ ಯಾಂತ್ರಿಕ ಸಾಧನೆಗಳೆಲ್ಲವೂ ಕೃತಕವಾಗಿರುವಂಥವು ಎಂಬುದು ನಿರ್ವಿವಾದ. ಅವು ಎಂದಿಗೂ ಜೀವನದ ಅಂತಿಮ ಮೌಲ್ಯಗಳಾಗವು. ಆರ್ಷೇಯವಾಗಿ ಲಭಿಸಿರುವ ನಮ್ಮ ಸಾಂಸ್ಕೃತಿಕ ಕೊಡುಗೆಯಲ್ಲಿ ಆಧ್ಯಾತ್ಮಿಕತೆ ಮಾನವ ಜೀವನವನ್ನು ಪರಿಷ್ಕರಿಸುವ, ಶುದ್ಧೀಕರಿಸುವ ಮೌಲ್ಯವಾಗಿದೆ. ಇತರ ಎಲ್ಲ ಮೌಲ್ಯಗಳಿಗೂ ಇದು ಮೂಲಾಧಾರ. ಸ್ವಲ್ಪ ವಿಸ್ತರಿಸಿ ಹೇಳುವುದಾದರೆ, ನಮ್ಮ ಆರೋಗ್ಯ, ದೇಹಸೌಖ್ಯ, ವಾಕ್ ಮತ್ತು ಶಬ್ದ ಸಂಚಲನ (communication), ಸಂಚಾರ ಮತ್ತು ಸಾರಿಗೆ ಸೌಕರ್ಯ – ಇವೇ ಮೊದಲಾದ ಕ್ಷೇತ್ರಗಳಲ್ಲಿ ಉಪಯುಕ್ತವಾದ ಸಾಧನೆಗಳು ಲಭ್ಯವಾಗಿರುವ ಮಾತ್ರಕ್ಕೆ ಅದು ಆಧ್ಯಾತ್ಮಿಕತೆಗೆ ಎಂದೂ ಸಾಟಿಯಾಗಲಾರದು. ನಮ್ಮ ನಮ್ಮ ವ್ಯಕ್ತಿನೈಪುಣ್ಯಕ್ಕಾಗಲಿ, ಕುಟುಂಬ ಸೌಖ್ಯಕ್ಕಾಗಲಿ, ರಾಷ್ಟ್ರಪ್ರಗತಿಗಾಗಲಿ ಬುನಾದಿಯೆನ್ನಿಸಿಕೊಳ್ಳುವುದು ಈ ಆಧ್ಯಾತ್ಮಿಕತೆಯೇ. ಇದನ್ನು ಸ್ವಾಮೀಜಿ ಪದೇ ಪದೇ ಸಮರ್ಥಿಸಿದ್ದಾರೆ.

ಸ್ವಾಮೀಜಿಯವರ ಹೇಳಿಕೆಗಳಲ್ಲಿ ಮತ್ತೊಂದು ಪ್ರಧಾನ ಅಂಶವೆಂದರೆ ಪರಮತ ಸಹಿಷ್ಣುತೆ. ಪ್ರಪಂಚದ ಎಲ್ಲ ಧರ್ಮಗಳಲ್ಲಿ ಅಡಗಿರುವ ಸತ್ಯ ಒಂದೇ. ಕಂಡುಬರುವ ವೈವಿಧ್ಯತೆಗಳು ಪ್ರಾದೇಶಿಕ ಆಚಾರ ಪರಂಪರೆಗಳಿಗೆ ಸೀಮಿತವಾಗಿರುತ್ತವೆ, ಅಷ್ಟೇ. ಈ ಸಹಿಷ್ಣುತೆ ನಮ್ಮ ಸಂಸ್ಕೃತಿಯಲ್ಲಿ ಪ್ರಕಾಶಿಸಿರುವ ಹಾಗೆ ಮತ್ತೆಲ್ಲೂ ಆಗಿಲ್ಲ. ಈ ದೃಷ್ಟಿಯನ್ನು ಪುಷ್ಟೀಕರಿಸಿ ನಮ್ಮ ಧಾರ್ಮಿಕ ಜೀವನದಲ್ಲಿ ಈ ಮೌಲ್ಯವನ್ನು ರಕ್ಷಿಸಿಕೊಂಡು ಬರುವುದೇ ನಮ್ಮೆಲ್ಲರ ಪವಿತ್ರಹೊಣೆಯಾಗಿದೆ. ಇದು ಸ್ವಾಮೀಜಿಯವರು ಬಿಟ್ಟುಹೋಗಿರುವ ಆದೇಶ.

ಈ ಲೇಖನವನ್ನು ಮುಕ್ತಾಯಗೊಳಿಸುವುದಕ್ಕೆ ಮುನ್ನ ನನ್ನ ವೈಯಕ್ತಿಕ ಅನುಭವಕ್ಕೆ ಸಂಬಂಧಿಸಿದ ಮತ್ತೊಂದು ಸವಿನೆನಪು. ನೌಕರಿಯಿಂದ ನಾನು ನಿವೃತ್ತನಾದ ಮೇಲೆ ಸುಮಾರು ೨೦ ವರ್ಷಗಳ ಕಾಲ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಂಗ ಸಂಸ್ಥೆಯಾದ ರಾಮಕೃಷ್ಣ ಆಧ್ಯಾತ್ಮಿಕ ಮತ್ತು ನೈತಿಕ ಶಿಕ್ಷಣ ಸಂಸ್ಥೆಯಲ್ಲಿ, ಪೂಜ್ಯ ಸ್ವಾಮಿ ಹರ್ಷಾನಂದಜಿಯವರಿಂದ ಮೊದಲ್ಗೊಂಡು, ಅನೇಕ ಸಾಧುಗಳ ಮತ್ತು ಬುದ್ಧಿಜೀವಿಗಳ ಸಂಪರ್ಕದಿಂದ ವಿವೇಕಾನಂದರ ಬಗ್ಗೆ ನಾನು ಹಂಚಿಕೊಂಡ ಅಭಿಪ್ರಾಯಗಳಿಗೆ ಸಮರ್ಥನೆ ದೊರಕಿದ್ದು ಬಹುಮಟ್ಟಿಗೆ ನನಗೆ ಸಮಾಧಾನವನ್ನು ತಂದುಕೊಟ್ಟಿದೆ. ನಮ್ಮ ವಿದ್ಯಾಸಂಸ್ಥೆಗಳಲ್ಲಿ ಸ್ವಾಮೀಜಿಯವರ ಜೀವನ ಚರಿತ್ರೆ ಮತ್ತು ಅವರ ಉಪದೇಶಗಳ ಬಗ್ಗೆ ಅರಿವು ಉಂಟಾಗುವ ಹಾಗೆ ವ್ಯವಸ್ಥೆ ಮಾಡಿದರೆ, ನಾವು ಸ್ವಲ್ಪಮಟ್ಟಿಗಾದರೂ ಋಣಮುಕ್ತರಾಗುವುದರಲ್ಲಿ ಸಂದೇಹವಿಲ್ಲ.

**– ಎಸ್. ಶ್ರೀನಿವಾಸಾಚಾರ್, ಮೈಸೂರು**

---

**ಕ**ನ್ನಡ ಭಾಷೆ ಸಾಹಿತ್ಯಗಳ ವಿಷಯದಲ್ಲಿ ನಾನು ಆಸಕ್ತಿ ಅಭಿರುಚಿಗಳನ್ನು ಬೆಳಸಿಕೊಳ್ಳಲು ನನಗೆ ಮೊದಲು ಸ್ಫೂರ್ತಿ ನೀಡಿದ್ದು ಸಹಾಯವಾದದ್ದು ಎಂದರೆ ಶ್ರೀರಾಮಕೃಷ್ಣ – ವಿವೇಕಾನಂದ ಸಾಹಿತ್ಯ. ಇದಕ್ಕೆ ನಿಮಿತ್ತವಾದವರು, ನನ್ನ ತಂದೆ. ಅವರ ಶಾಲೆಯ ಶಿಕ್ಷಣ ಮಾಧ್ಯಮಿಕಕ್ಕೇ ಮುಗಿದು, ಕುಟುಂಬ ನಿರ್ವಹಣೆಗೆ ಅವರು ತೀರ ಸಣ್ಣ ಪುಟ್ಟ ಚಾಕರಿಗಳನ್ನೇ ಹಿಡಿಯಬೇಕಾಗಿ ಬಂದರೂ, ತಮಗೆ ದೊರೆತ ಸತ್ಸಂಗದಿಂದ ಅವರು ಆ ಸಾಹಿತ್ಯದ ಕಡೆಗೆ ಒಲವು ಬೆಳೆಸಿಕೊಂಡಿದ್ದರು. ಇದಕ್ಕೆ ಕಾರಣವಾದವರು ನಮ್ಮ ಊರಿನಲ್ಲಿ (ರಾಮನಗರ ಜಿಲ್ಲೆಯ ಕನಕಪುರ) ನಮ್ಮ ಮನೆಯೆದುರಿನಲ್ಲಿ ವಾಸವಿದ್ದ ನಿವೃತ್ತ ಶಾಲಾಧ್ಯಾಪಕ ಗುರುನಾಥ ವೆಂಕಟರಾಮಯ್ಯನವರು. (ಇವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಸರ್ದಾರ್ ವೆಂಕಟರಾಮಯ್ಯನವರಿಗೆ, ಅವರ ಬಾಲ್ಯ ಕಾಲದ ಉಪಾಧ್ಯಾಯರು.) ಸ್ಥಳವಂದಿಗರು ಇವರನ್ನು 'ಕಾನಕಾನಹಳ್ಳಿ ಸಾಕ್ರೆಟೀಸ್' ಎಂದು ಕರೆಯುತ್ತಿದ್ದರು. (ಕಾನಕಾನಹಳ್ಳಿ ಕನಕಪುರದ ಹಳೆಯ ಹೆಸರು.) ಇವರು ತಮ್ಮ ಬಾಲ್ಯಕಾಲದಲ್ಲಿ ಮೈಸೂರಿನಲ್ಲಿಯೋ ಮದರಾಸಿನಲ್ಲಿಯೋ ಸ್ವಾಮೀಜಿಯವರನ್ನು ಸಾಕ್ಷಾತ್ತಾಗಿ ನೋಡಿದ್ದರೆಂದೂ ಅವರ ಉಪನ್ಯಾಸವನ್ನು ಕೇಳಿದ್ದರೆಂದೂ, ನಮ್ಮೂರಿನ ಹಿರಿಯರು ನನ್ನ ಚಿಕ್ಕವಯಸ್ಸಿನಲ್ಲಿ ಹೇಳುತ್ತಿದ್ದರು.

ಈ ಗುರುನಾಥ ವೆಂಕಟರಾಮಯ್ಯನವರು ತಮ್ಮಲ್ಲಿದ್ದ ರಾಮಕೃಷ್ಣ ವಿವೇಕಾನಂದ ಸಾಹಿತ್ಯದ ಕನ್ನಡ ಪುಸ್ತಕಗಳನ್ನು ನಮ್ಮ ತಂದೆಗೆ ಕೊಟ್ಟು ಓದಿಸುತ್ತಿದ್ದರು. ಅಲ್ಲದೆ ಅವರು ನಮ್ಮ ತಂದೆಗೆ ಸ್ವಾಮೀಜಿಯವರ ಒಂದು ದೊಡ್ಡ ಚಿತ್ರವನ್ನು ಕೊಟ್ಟು, ಅದಕ್ಕೆ ಕಟ್ಟು ಹಾಕಿಸಿ ನಮ್ಮ ಮನೆಯ ಹಜಾರದಲ್ಲಿ ಗೋಡೆಗೆ ತಗುಲಿಹಾಕಬೇಕೆಂದೂ, ತಮ್ಮ ಮನೆಯ ಮಲಗುವ ಕೋಣೆಯ ಕಿಟಕಿಯಿಂದ ತಾವು ಬೆಳಗ್ಗೆ ಎದ್ದು ನೋಡುವಾಗ ಅದು ಕಣ್ಣಿಗೆ ಕಾಣಬೇಕೆಂದೂ ತಿಳಿಸಿದ್ದರು. ಆ ಚಿತ್ರಕ್ಕೆ ಎರಡು ರೂಪಾಯಿ ಕೊಟ್ಟು ಕಟ್ಟು ಹಾಕಿಸಿ, ನಮ್ಮ ತಂದೆ